ಛತ್ರಪತಿ

– ನಾ ಕಂಡಂತೆ ಶಿವಾಜಿ

(ಎರಡನೇ ಮುದ್ರಣ)

ಗುರುಪ್ರಸಾದ ಭಟ್

VIVIDLIPI

CHATRAPATI - NAA KANDANTE SHIVAAJI

by
GURUPRASAD BHAT
503, Keerthi Momento Apartments
Nayarkere Road, Kinnimulky
UDUPI - 576103, Karnataka
cell: 9819324363
email: gurubhat@hotmail.com

Published by
VIVIDLIPI (Mooka Ventures Pvt. Ltd.)
1st Floor `Brahmananda Nilaya'
Kabbur Road,
Near Kelkar Maruti Temple, Malmaddi,
DHARWAD-580 007
Karnataka-India
Cell: +919535015489
Mail ID: support@vividlipi.com
Download mobile app- www.vividlipi,com/app

ಮೊದಲ ಮುದ್ರಣ: **2023**
ಎರಡನೇ ಮುದ್ರಣ: **2024**
ಪುಟಗಳು: **322**

ಬೆಲೆ: ರೂ. 320/–

ISBN: 978–81–957119–7–0

ಮುಖಪುಟ: **ರವೀಂದ್ರ ಅ. ವಿಶ್ವಜ್ಞ,** ಆರ್ಟೆಕ್, ಧಾರವಾಡ

ಅಕ್ಷರ ಜೋಡಣೆ & ಪುಟವಿನ್ಯಾಸ
ಮೊದಲ ಮುದ್ರಣ : **ಯಾಜಿ ಪ್ರಕಾಶನ, ಹೊಸಪೇಟೆ**
Mob. No. : 7019637741 / 9449922800

ಎರಡನೇ ಮುದ್ರಣ : **ಸ್ವರ್ಣಲತಾ ಕೇಕುಣ್ಣಾಯ, ಉಡುಪಿ**
Mob. No. : 9480986878 / 9342438727

ಮುದ್ರಕರು
ಸತ್ಯಾನಂದ ಪ್ರಿಂಟರ್ಸ್, ಬೆಂಗಳೂರು

ಅರ್ಪಣೆ

ಹೆಜ್ಜೆ ಹೆಜ್ಜೆಗೂ ಸಹಕರಿಸಿದ
ನನ್ನ ಮಡದಿ ಶ್ರೀಮತಿ ಸುಪರ್ಣ
ಹಾಗೂ
ಕಣ್ಮಣಿಗಳಾದ
ಚಿ|| ಅಪರ್ಣ ಮತ್ತು **ಚಿ|| ಶಿವಾನಿ**
ಅವರಿಗೆ

ಪ್ರಕಾಶಕರ ನುಡಿ

ಒಬ್ಬ ನಾಯಕನ ಗುಣಗಳು ಏನೆಂದು ಕೇಳಿದರೆ ಥಟ್ಟನೆ ಮನಸ್ಸಿಗೆ ಬರುವ ಕೆಲವು ಗುಣಗಳು ನಿರ್ವಹಣೆ, ದೂರದೃಷ್ಟಿ, ರಾಜತಾಂತ್ರಿಕತೆ, ದಕ್ಷ ಆಡಳಿತ, ಸತ್ಯ ಮತ್ತು ನ್ಯಾಯದ ಕಡೆಗೆ ನಿಷ್ಠೆ ಇತ್ಯಾದಿ. ಭಾರತದಲ್ಲಿ ನಾವು ಈ ನಾಯಕತ್ವ ಗುಣಗಳ ಪ್ರತಿಬಿಂಬಿಸುವ ಅನೇಕ ರಾಜರನ್ನು ನೋಡಿದ್ದೇವೆ, ಅವರ ಬಗ್ಗೆ ಕೇಳಿದ್ದೇವೆ. ಇಂತಹ ನಾಯಕರಲ್ಲಿ ಶಿವಾಜಿ ಮಹಾರಾಜರು ಅಗ್ರಗಣ್ಯರು. ನಾಯಕತ್ವದ ಗುಣದೊಂದಿಗೆ ವಿಭಿನ್ನ ರಣತಂತ್ರದೊಂದಿಗೆ ಯುದ್ಧ ಮಾಡಿ ಶತ್ರುಗಳಿಗೆ ಯಮದರ್ಶನ ಮಾಡಿಸಿದವರು –ಛತ್ರಪತಿ ಶಿವಾಜಿ ಮಹಾರಾಜರು.

ಇಂತಹ ಮಹಾನ್ ನಾಯಕರ ಬಗ್ಗೆ ಒಲವನ್ನು ಬೆಳೆಸಿಕೊಂಡ ಉಡುಪಿಯ ಗುರುಪ್ರಸಾದ ಭಟ್ ಅವರು ಶಿವಾಜಿ ಕುರಿತಾಗಿ ಗ್ರಂಥ ರಚಿಸುತ್ತಿದ್ದಾರೆ ಎಂದು ನಮಗೆ ತಿಳಿಸಿದ್ದು ಅವರ ಆಪ್ತ ಮಿತ್ರರಾದ ಸತ್ಯೇಶ್ ಎನ್ ಬೆಳ್ಳೂರ್ ಅವರು. ಇದನ್ನು ವಿವಿಡ್ಲಿಪಿಯಲ್ಲಿ ಪ್ರಕಟಿಸಬೇಕೆಂದು ಅವರಿಗೆ ಕೋರಿಕೆ ಕಳುಹಿಸಿದೆ. ಅವರ ಒಪ್ಪಿಗೆಯಂತೆ ಇದನ್ನು ಈಗ ಪುಸ್ತಕ ರೂಪದಲ್ಲಿ ತರುತ್ತಿದ್ದೇವೆ. ಇದು ನನಗೆ ಅತ್ಯಂತ ಸಂತಸದ ವಿಷಯ.

ನಾನು ಬೆಳೆದದ್ದು ಉತ್ತರ ಕರ್ನಾಟಕದಲ್ಲಿ. ಸೋಲಾಪುರ ನಮಗೆ ಬಹು ಹತ್ತಿರದ ಊರು. ನನ್ನ ಸ್ನೇಹಿತರಲ್ಲಿ ಹಲವರು ಮರಾಠ ಸ್ನೇಹಿತರು... ಘಾಟ್ಗೆ, ಭೋಸಲೆ ಮುಂತಾದವರು ಆತ್ಮೀಯ ಸ್ನೇಹಿತರು. ಶಿವಾಜಿ ಮಹಾರಾಜರ ಬಗ್ಗೆ ಶಾಲೆಯಲ್ಲಿ ಓದಿದ್ದು ಅಲ್ಲದೆ, ಸ್ನೇಹಿತರಿಂದ ಕೇಳಿದ್ದು ಉಂಟು ಮತ್ತು ಬೇರೆ ಪುಸ್ತಕಗಳಿಂದ ಓದಿದ್ದು ಉಂಟು. ಸ್ನೇಹಿತರ ಒಡನಾಟದಲ್ಲಿ ಮರಾಠರ ಕ್ಷಾತ್ರತೇಜದ ಗುಣಲಕ್ಷಣಗಳನ್ನು ಅರಿತಿದ್ದೇನೆ. ಶಿವಾಜಿ ಮಹಾರಾಜರ ಪುಸ್ತಕ ಪ್ರಕಟಿಸುವ ಆಸಕ್ತಿ, ಆಶಯ ಬರಲು ಇವೆಲ್ಲ ಕೂಡ ಒಂದು ಕಾರಣ.

ಗುರುಪ್ರಸಾದ ಭಟ್ಟರು ಈ ಪುಸ್ತಕದಿಂದ ಶಿವಾಜಿ ಮಹಾರಾಜರ ಜೀವನಗಾಥೆ

ಯನ್ನು ವಿವಿಧ ಹಂತಗಳಲ್ಲಿ ಬರೆದಿದ್ದಾರೆ. ಶಿವಾಜಿ ಮಹಾರಾಜರು ತಮ್ಮ ರಣತಂತ್ರದಿಂದ ಯುದ್ಧ ಗೆದ್ದಂತೆ, ಭಟ್ಟರು ತಮ್ಮ ಸಾಹಿತ್ಯ ರಚನಾತಂತ್ರದಿಂದ ಓದುಗರ ಮನಸ್ಸನ್ನು ಗೆಲ್ಲುವುದು ಖಂಡಿತ.

ಈ ಪುಸ್ತಕ ತಮ್ಮ ಮುಂದೆ ತರಲು ಸಹಾಯ ಮಾಡಿದ ಗುರುಪ್ರಸಾದ ಭಟ್ಟರಿಗೆ, ಸತ್ಯೇಶ್ ಎನ್ ಬೆಳ್ಳೂರ್ ಅವರಿಗೆ, ಮುಖಪುಟ ರಚನೆ ಮಾಡಿದ ರವೀಂದ್ರ ಅ. ವಿಶ್ವಜ್ಞ ಅವರಿಗೆ, ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ ಮಾಡಿದ ಯಾಜಿ ದಂಪತಿಗಳಿಗೆ, ಪುಸ್ತಕ ಮುದ್ರಣಕ್ಕೆ ಸಹಕರಿಸಿದ ಸತ್ಯಾನಂದ ಪ್ರಿಂಟರ್ಸ್ ಅವರಿಗೆ, ವಿವಿಡ್ಲಿಪಿ ತಂಡದವರಿಗೆ ಹಾಗೂ ನಮ್ಮೆಲ್ಲ ಬಂಧು ಮಿತ್ರರಿಗೆ ಧನ್ಯವಾದ ಅರ್ಪಿಸುತ್ತೇನೆ.

ವಂದನೆಗಳು.

ಶುಕ್ರವಾರ, ನವೆಂಬರ್ 03, 2023 **ಸತ್ಯಪ್ರಮೋದ**

ಮುನ್ನುಡಿ

ಭಟ್, ಶಿವಾಜಿಯ ಅಪ್ರತಿಮ ಭಂಟ...!

ಈ ಗ್ರಂಥದ ಕರ್ತೃ, ನನ್ನ ಆತ್ಮೀಯ ಗೆಳೆಯರಾದ ಶ್ರೀ ಗುರುಪ್ರಸಾದ ಭಟ್ ಅವರು. ಅವರೊಡನೆ ನನ್ನ ಒಡನಾಟ ಸುಮಾರು ನಾಲ್ಕು ದಶಕಗಳಿಗೂ ಮೀರಿದ್ದು. ಹಲವಾರು ಕಾರಣಗಳಿಂದ ಅವರು ನನಗೆ ತುಂಬಾ ಆಪ್ತರಾಗಿದ್ದಾರೆ. ಕೆಲವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಬಯಕೆ.

ಜೊತೆಯಲ್ಲಿಯೇ ಇಂಜಿನಿಯರಿಂಗ್ ಓದಿ, ಹಲವಾರು ವರ್ಷಗಳ ಕಾಲ ಇಬ್ಬರೂ ಸೀಮೆನ್ಸ್ ಕಂಪನಿಯಲ್ಲಿ ಕೆಲಸದಲ್ಲಿದ್ದೆವು. ಭಟ್ ತನ್ನ ಕೆಲಸದಲ್ಲಿ ತೋರುತ್ತಿದ್ದ ಆಸಕ್ತಿಯಿಂದಾಗಿ ಇಂದೀಗ ಆತ ಅಮೆರಿಕೆಯ ಒಂದು ಕಂಪನಿಯ ಭಾರತ ದೇಶದ ಕಚೇರಿಗೆ ಮುಖ್ಯಸ್ಥ. ಅರ್ಥಾತ್, ಸಿ.ಇ.ಓ. ಅವರ ಈ ಪರಿಯ ವೃತ್ತಿಯಲ್ಲಿನ ಬೆಳವಣಿಗೆ ನನಗೆ ಖುಷಿ ಕೊಟ್ಟ ಒಂದು ಸಂಗತಿ.

ಈ ದಾರಿಯಲ್ಲಿ ನಡೆಯುತ್ತಲೇ ಸಾಹಿತ್ಯ ಸಂಗೀತಗಳ ಒಲವನ್ನೂ ಉಳಿಸಿ ಕೊಂಡಿದ್ದಾರೆ. ನನ್ನ ಬಹುತೇಕ ಎಲ್ಲಾ ಪುಸ್ತಕಗಳ ಹತ್ತಾರು ಪ್ರತಿಗಳನ್ನು ಕೊಂಡು, ತಾನು ಮಾತ್ರ ಓದುವುದಲ್ಲದೆ, ತನ್ನ ಆಪ್ತರಿಗೂ ಹಂಚುವ ಪ್ರವೃತ್ತಿ. ಬರಹಗಾರನಾಗಿ ನನಗೆ ಇಂತಹ ಸ್ನೇಹ ಅಪ್ಯಾಯಮಾನವೇ ಆಗಿದೆ.

ಒಬ್ಬ ವ್ಯಕ್ತಿ ಆರೋಗ್ಯವಾಗಿರಲು ಆತನಿಗೆ ಬೇಕಾದುದು ಒಳ್ಳೆಯ ಆಹಾರ ಹಾಗೂ ನಿರಂತರ ವ್ಯಾಯಾಮ. ಇವರೆಡರಲ್ಲಿಯೂ ಭಟ್ ಎಂದಿಗೂ ಉದಾಸೀನ ಮಾಡಿರುವುದನ್ನು ನಾನು ಕಂಡೇ ಇಲ್ಲ. ಅಷ್ಟೊಂದು ಸಂಯಮ ಹಾಗೂ ಶಿಸ್ತು. ಹಾಗಾಗಿಯೇ, ಅರುವತ್ತರ ಹೊಸ್ತಿಲು ದಾಟಿದರೂ ಭಟ್ ಒಮ್ಮೆಗೆ ನಿರಾಯಾಸವಾಗಿ ಐನೂರು ಭಸ್ಕಿಗಳನ್ನು ಹೊಡೆಯುತ್ತಾರೆ ಎಂದರೆ ನೀವೇ ಊಹಿಸಿಕೊಳ್ಳಿ. ಇದರ ಜೊತೆಗೆ ಧ್ಯಾನ ಅವರನ್ನು ಎಂದಿಗೂ ಬಿಟ್ಟಿರದ ನಂಟು.

ಇಂದಿನ ದಿನಗಳಲ್ಲಿ ರಾಷ್ಟ್ರಾಭಿಮಾನ ಎಂಬುದು ಒಂದು ವಿವಾದಾಸ್ಪದವಾದ ವಿಷಯವೇ ಆಗಿದೆ. ಹಾಗೆಯೇ, 'ಹಿಂದುತ್ವ' ಎಂಬ ಭಾವ. ಇಂತಹ ಸಮಾಜದಲ್ಲಿ

ನಿಶ್ಚಲವಾದ ರಾಷ್ಟ್ರ ಪ್ರೇಮವನ್ನು ಹಾಗೂ ಹಿಂದುತ್ವ ಸಿದ್ಧಾಂತವನ್ನು ಸರ್ವದಾ ಒಂದು ಸ್ಥಿರವಾದ ನೆಲೆಗಟ್ಟಿನಲ್ಲಿ ಪ್ರತಿಪಾದಿಸುವ ನನ್ನ ಸ್ನೇಹಿತರಲ್ಲಿ ಭಟ್ ಅಗ್ರಜ. ಇದರೊಟ್ಟಿಗೆ ಅವರಿಗೆ ಹತ್ತಿರವಾದ ಚಾರಿತ್ರಿಕ ವ್ಯಕ್ತಿತ್ವವೇ–ಛತ್ರಪತಿ ಶಿವಾಜಿ ಮಹಾರಾಜರು.

ದೇಶವನ್ನು ಪ್ರೀತಿಸುವ ಯಾರಿಗೆ ತಾನೇ ಶಿವಾಜಿ ಇಷ್ಟವಾಗುವುದಿಲ್ಲ ಹೇಳಿ. ಭಟ್ ಜೊತೆಗೆ ಮಾತಿಗೆ ಕುಳಿತದಾಗಲೆಲ್ಲ, ಶಿವಾಜಿಯ ಬಗ್ಗೆ ಪ್ರಸ್ತಾಪಿಸದೆ ಮಾತೇ ಮುಗಿಯುವುದಿಲ್ಲ. ಭಟ್ ಶಿವಾಜಿಯನ್ನು ಆರಾಧಿಸುತ್ತಾರೆ. ಹಾಗಾಗಿ ಶಿವಾಜಿಯ ಬಗ್ಗೆ ಬಹಳಷ್ಟು ಗ್ರಂಥಗಳನ್ನು ಓದಿ ತಿಳಿದುಕೊಂಡಿದ್ದಾರೆ. ಶಿವಾಜಿಯ ಬಹುತೇಕ ಎಲ್ಲಾ ಕೋಟೆಕೊತ್ತಲಗಳನ್ನು ಹಲವು ಬಾರಿ ಕಂಡುಬಂದಿದ್ದಾರೆ. ಶಿವಾಜಿಯ ಸ್ಮಾರಕಗಳನ್ನು ನೋಡಲು ತೀರ್ಥಯಾತ್ರೆಗೆ ಹೋಗುವ ಹಾಗೇ ಭಕ್ತಿಭಾವದಿಂದ ತೆರಳುತ್ತಾರೆ. ಒಂದು ರೀತಿಯಲ್ಲಿ ಹೇಳುವುದಾದರೆ, ಭಟ್ ಶಿವಾಜಿಯ ಅಪ್ರತಿಮ ಭಂಟ.

ಶಿವಾಜಿಯ ಕುರಿತಾದ ಅವರ ಮಾತುಗಳನ್ನು ಕೇಳುತ್ತಿರುವ ಒಂದು ದಿನವೇ, 'ನೀನು ಯಾಕೆ ಶಿವಾಜಿಯನ್ನು ಕುರಿತಾದ ಗ್ರಂಥವೊಂದನ್ನು ರಚಿಸಬಾರದು' ಎಂಬ ಸಲಹೆಯನ್ನಿತ್ತಿದ್ದೆ. ಅದು ಇಂದು ಗ್ರಂಥ ರಚನೆಯ ಮೂಲಕ ನಿಜವಾಗುತ್ತಿರುವುದು ನನಗಂತೂ ಸಂತಸದ ವಿಷಯ. ಯಾರನ್ನು ನಾವು ಆರಾಧಿಸುತ್ತೇವೆಯೋ, ಅಂತಹ ವರ ವ್ಯಕ್ತಿತ್ವವನ್ನು ಕುರಿತಾಗಿ ಗ್ರಂಥರಚನೆಗೆ ಇಳಿದಾಗ, ಅದು ಉತ್ಕೃಷ್ಟವಾಗಿ ಹೊಮ್ಮಿ ಬರುವುದರಲ್ಲಿ ನನಗಂತೂ ಸಂದೇಹವೇ ಇಲ್ಲ. ಈ ಪುಸ್ತಕವನ್ನು ಓದುವ ನಿಮಗೂ ಇದರ ಅನುಸಂಧಾನವಾಗುತ್ತದೆ ಎಂದರೆ, ಅದು ಉತ್ಪ್ರೇಕ್ಷೆಯ ಮಾತೂ ಅಲ್ಲ.

ಸುಮಾರು ಮುನ್ನೂರು ಪುಟಗಳನ್ನು ಮೀರಿದ ಈ ಗ್ರಂಥ, 1645ರಲ್ಲೊಂದು ದಿನ ಬಾಲ ಶಿವಾಜಿ ತನ್ನ ಆಪ್ತ ಗೆಳೆಯರೊಂದಿಗೆ 'ಹಿಂದವೀ ಸ್ವರಾಜ್ಯ'ದ ಕಲ್ಪನೆಯ ಸಾಕ್ಷಾತ್ಕಾರಕ್ಕಾಗಿ ಪ್ರತಿಜ್ಞಾಬದ್ಧನಾಗುವ ಕ್ಷಣದಿಂದ ಹಿಡಿದು, ಅವರ ಅದಮ್ಯವಾದ ವ್ಯಕ್ತಿತ್ವವನ್ನು ಹಂತಹಂತವಾಗಿ ತೋರ್ಪಡಿಸುತ್ತಲೇ ಸಾಗುತ್ತದೆ, ಇಲ್ಲಿಯ ಕಥನ. ಶಿವಾಜಿಯ ಜೀವನಚರಿತ್ರೆಯನ್ನು ಒಂದು ಕಾದಂಬರಿಯ ರೂಪದಲ್ಲಿ ಪ್ರಸ್ತುತ ಪಡಿಸುವುದು ಒಂದು ವಿಧವಾದರೆ, ಆ ಮಹಾನ್ ಚೇತನದ ವ್ಯಕ್ತಿತ್ವವನ್ನು ಕೆಲವೆಡೆ ಪ್ರಶ್ನೋತ್ತರಗಳ ಆಯಾಮದಲ್ಲಿ, ಇನ್ನೂ ಕೆಲವೆಡೆ ಅಂಕಿ ಅಂಶಗಳ ಹಾಗೂ ಪ್ರಕಟಿತ ಸಂಶೋಧನಾತ್ಮಕ ಗ್ರಂಥಗಳ ಆಧಾರದ ಮೇಲೆ ಕಟ್ಟಿಕೊಡುವುದು ಇನ್ನೊಂದು ವಿಧ. ಭಟ್ ಅವರು ಈ ಎರಡನೆಯ ಮಾರ್ಗವನ್ನು ಬಳಸಿದ್ದಾರೆ. ಅಷ್ಟೇ ಅಲ್ಲದೆ, ಅಲ್ಲಲ್ಲಿ ತನ್ನ ಆಂತರ್ಯಕ್ಕೆ ಕಂಡುಬಂದ ಸತ್ಯಗಳನ್ನು ಹಾಗೂ ತನ್ನ ವಿವೇಚನೆಗೆ ಸಿಲುಕಿ ಹೊರಬಂದ ವಿಚಾರಗಳನ್ನೂ ಮಂಡಿಸುತ್ತಾರೆ. ಹಾಗಾಗಿ, ಈ ಗ್ರಂಥ ಶಿವಾಜಿಯನ್ನು ಒಂದು ವಿಶೇಷವಾದ ಸ್ತರದಲ್ಲಿ ಚಿತ್ರಿಸುವತ್ತ ಯಶಸ್ವಿಯಾಗಿದೆ ಎಂದೇ ಹೇಳಬೇಕು.

ಶಿವಾಜಿ ಮಾತ್ರವಲ್ಲ, ಇನ್ನಾವುದೇ ರಾಜರ ಕಥನ ಬಂದಾಗಲೂ, ಅವರ ಯುದ್ಧಾಭ್ಯಾಸ, ಕದನಗಳಲ್ಲಿ ತೋರುತ್ತಿದ್ದ ಪರಾಕ್ರಮ, ವೈರಿಗಳನ್ನು ಸದೆಬಡಿಯುತ್ತಿದ್ದ ಅವರ ಧೀರೋದ್ಧಾತ್ತವಾದ ಯುದ್ಧ ನೈಪುಣ್ಯತೆ, ಅವರು ಗೆದ್ದುಕೊಂಡ ಕೋಟೆ ಕೊತ್ತಲಗಳ ವಿವರಣೆ –ಹೀಗೆ ಓದುಗರಿಗೆ ರೋಮಾಂಚನವೀವ ಸಂಗತಿಗಳೇ ತುಂಬಿರುತ್ತವೆ. ಇವೆಲ್ಲವುಗಳ ನಡುವೆ ಆ ಮಹಾರಾಜರ ಆಂತರ್ಯ, ಕಲಿಕೆ, ಪರಿಶ್ರಮ, ಮಾನವೀಯತೆ ಇತ್ಯಾದಿ ಸೂಕ್ಷ್ಮ ವಿಷಯಗಳು ಬಹಳಷ್ಟು ಗೌಣವಾಗಿ ಬಿಡುವುದುಂಟು. ಈ ಗ್ರಂಥದಲ್ಲಿ ಹಾಗೇ ಆಗಿಲ್ಲದಿರುವುದು ನನಗೆ ಖುಷಿ ಕೊಟ್ಟ ವಿಷಯ. ಶಿವಾಜಿಯನ್ನು ಒಂದು ಮಾದರಿ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಅರ್ಥೈಸಿ ಕೊಳ್ಳಬೇಕು ಎಂದು ಆಶಿಸುವ ಮಂದಿಗೆ, ಈ ಗ್ರಂಥ ಒಂದೊಳ್ಳೆಯ ಓದು! ಗ್ರಂಥವನ್ನು ಓದಲು ಶುರು ಮಾಡುವ ಮುನ್ನ ಪರಿವಿಡಿಯಲ್ಲಿರುವ ವಿಷಯಗಳನ್ನು ಒಮ್ಮೆ ಮೆಲುಕು ಹಾಕಿ. ಆಗ ನನ್ನ ಈ ಮಾತಿಗೆ ನೀವೂ ಸಮ್ಮತಿಸುತ್ತೀರ! ವಿಶೇಷವೆಂದರೆ, ಈ ಗ್ರಂಥವನ್ನು ಮೊದಲ ಪುಟದಿಂದ ಕಡೆಯ ಪುಟದವರೆಗೂ ಓದಬಹುದಾದರೂ, ಅಲ್ಲಲ್ಲಿ ಇಷ್ಟವೆನಿಸುವ ವಿಷಯಗಳನ್ನು ಆಗಾಗ್ಗೆ ಒಂದು ಪರಿಶ್ರಮವಿಲ್ಲದೆ ಓದಿಕೊಂಡರೂ ಸಹ ಕಡೆಯಲ್ಲಿ ಶಿವಾಜಿ ಅರ್ಥವಾಗುವುದರಲ್ಲಿ ಮತ್ತು ಸಾರ್ಥವಾಗುವುದರಲ್ಲಿ ನನಗೆ ಸಂದೇಹವೇ ಇಲ್ಲ.

ನನ್ನ ವೈಯುಕ್ತಿಕ ಅಭಿಪ್ರಾಯದಲ್ಲಿ, ಶಿವಾಜಿ ನಮ್ಮೆಲ್ಲರ ಬದುಕಿನಲ್ಲಿ ಎಂದಿಗಿಂತ ಇಂದೇ ಅತ್ಯಂತ ಪ್ರಸ್ತುತ. ರಾಷ್ಟ್ರಾಭಿಮಾನ ಎಂಬುದು ಚರ್ಚೆಗೊಳಗಾಗುತ್ತಿರುವ ಈ ಪರ್ವಕಾಲದಲ್ಲಿ, ಶಿವಾಜಿಯ ಹಾಗೆ ಗೊಂದಲಗಳಿಲ್ಲದ ಏಕಚಿತ್ತ ಎಲ್ಲರಿಗೂ ಅತ್ಯಾವಶ್ಯಕ. ಶಿವಾಜಿಯ ಪರಾಕ್ರಮಗಳ ಹಿನ್ನೆಲೆಯಲ್ಲೇ ಅವರು ನಡೆದ ಮಾನವೀಯ ಹಾದಿ ಎಲ್ಲರಿಗೂ ದಿಕ್ಸೂಚಿಯಾದರೆ, ಭಾರತ 'ವಿಶ್ವಗುರು' ಆಗುವುದರಲ್ಲಿ ಹೆಚ್ಚು ಸಮಯ ಬೇಡವೆಂದೇ ಎನ್ನಿಸುತ್ತದೆ. ಹಾಗಾಗಿ, ಶಿವಾಜಿಯ ಕುರಿತಾಗಿ ಶಿವಾಜಿಯ ಆರಾಧಕರೊಬ್ಬರು ಅತ್ಯಂತ ಪ್ರೀತ್ಯಾಧಾರಗಳಿಂದ ರಚಿಸಿರುವ ಈ ಹೊತ್ತಿಗೆಯನ್ನು ಎಲ್ಲರು ಆದರದಿಂದ ಸ್ವೀಕರಿಸುವಂತಾಗಲಿ ಹಾಗೂ ಓದಿ, ಓದಿಸುವಂತಾಗಲಿ ಎಂಬುದೇ ನನ್ನ ಹಾರೈಕೆ. ಗೆಳೆಯ ಭಟ್ ಅವರ ಈ ಸಾರಸ್ವತ ಮೈಲುಗಲ್ಲಿಗೆ ನನ್ನ ಅತ್ಯಂತ ಪ್ರೀತಿಯ ಅಭಿನಂದನೆಗಳು.

ಆರೋಗ್ಯವಾಗಿರಿ, ಸದಾ ನಗ್ತಾ ನಗ್ತಾ ಇರಿ.....

ಎಲ್ಲರಿಗೂ ಒಳ್ಳೆಯದಾಗಲಿ.

ನಿಮ್ಮವನೇ ಆದ,

ಅಕ್ಟೋಬರ್ 1, 2023 –ಬೆಂಗಳೂರು

ಸತ್ಯೇಶ್ ಎನ್. ಬೆಳ್ಳೂರ್
ಕವಿಗಳು, ಚಿಂತಕರು ಹಾಗೂ
ಮ್ಯಾನೇಜ್‌ಮೆಂಟ್ ಗುರು

ಪ್ರಸ್ತಾವನೆ

(ಪ್ರಥಮ ಮುದ್ರಣ)

"ಶಿವಾಜಿಗಿಂತಲೂ ದೊಡ್ಡ ನಾಯಕ, ಹಿರಿಯ ಸಂತ, ಗರಿಮೆಯ ಯೋಗಿ, ದೊಡ್ಡ ಭಕ್ತ ಮತ್ತು ಮಹಾನ್ ರಾಜ ಇದ್ದಾರೆಯೇ? ಶಿವಾಜಿಯದು ಈ ಎಲ್ಲ ಮೌಲ್ಯಗಳನ್ನೂ ಸಾಕಾರಗೊಂಡ ಒಬ್ಬ ಪರಿಪೂರ್ಣ ವ್ಯಕ್ತಿತ್ವ! ನಮ್ಮ ಶಾಸ್ತ್ರಗಳು, ವೇದ ಪುರಾಣಗಳು ಒಬ್ಬ ಆದರ್ಶ ರಾಜನಲ್ಲಿರಬೇಕೆಂದು ಆಶಿಸಿದ ಸುಗುಣಶೀಲ ಆದರ್ಶಗಳೆಲ್ಲವನ್ನು ಹೊಂದಿದ ಏಕೈಕ ರಾಜನೆಂದರೆ ಶಿವಾಜಿ. ಅವರು ಈ ಪವಿತ್ರ ಭೂಮಿಯ ಆತ್ಮಸಾಕ್ಷಿಯ ರಾಯಭಾರಿ. ಅವರು ಭಾರತದ ಭವಿಷ್ಯ ಮುಂದೆ ಹೇಗಿರಬೇಕು, ಒಂದೇ ಸಾರ್ವಭೌಮತ್ವದ ಛತ್ರಿಯಡಿ ಅನೇಕ ಸ್ವತಂತ್ರ ರಾಜ್ಯಗಳು ಹೇಗಿರಬೇಕು, ಅಷ್ಟಾಂಗಪ್ರಧಾನ ಹೇಗೆ ವಿಕೇಂದ್ರೀಕರಣಕ್ಕೆ ಒತ್ತು ಕೊಡಬಲ್ಲದು, ಎಂದೆಲ್ಲ ತೋರಿಸಿಕೊಟ್ಟ ಧುರಂಧರ" –ಇದನ್ನು ಹೇಳಿದವರು ಸ್ವಾಮಿ ವಿವೇಕಾನಂದರು!

ಅಂದರೆ, "ಶಿವಾಜಿ" ಎಂಬ ಮೌಲ್ಯ ಈ 21ನೇ ಶತಮಾನಕ್ಕೂ ಅತ್ಯಂತ ಪ್ರಸ್ತುತ. ಶಿವಾಜಿ ಮಹಾರಾಜರು ಜೀವಿಸಿದ ರೀತಿ, ರಾಜ್ಯವಾಳಿದ ಪರಿ, ಅವರ ಸರ್ವೋಚ್ಚ ನೀತಿ ನಿಯಮಗಳು ಶ್ರೀ ಸಮರ್ಥ ಸ್ವಾಮಿ ರಾಮದಾಸರನ್ನೇ ಮೆಚ್ಚಿಸಿದ ಸಗುಣಗಳು. ಅವುಗಳಿಂದ ನಾವು ಇಂದಿಗೂ ಪಾಠ ಕಲಿಯಬಹುದು. ನನಗಂತೂ ಶಿವಾಜಿ ಅಂದರೆ ಒಂದು ಧ್ಯೇಯ, ಅದಮ್ಯ ಭಕ್ತಿ, ಅಪಾರ ಶ್ರದ್ಧೆ, ಪರಮ ಪ್ರೀತಿ. ಅವರ ಕುರಿತು ಅನೇಕ ಪುಸ್ತಕಗಳನ್ನು ಓದಿದ್ದೇನೆ. ಅವರ ಕರ್ಮಭೂಮಿ, ಯುದ್ಧ ಭೂಮಿ, ಕೋಟೆ–ಕೊತ್ತಳಗಳನ್ನೆಲ್ಲ ಅನೇಕ ಬಾರಿ, ತೀರ್ಥಯಾತ್ರೆ ಎಂಬಂತೆ, ಸುತ್ತಾಡಿದ್ದೇನೆ. ಪ್ರಸ್ತುತ ಪ್ರಕ್ಷುಬ್ಧ ವಾತಾವರಣದಲ್ಲಿ ಅನೇಕ ಬಾರಿ ಅನ್ನಿಸಿದ್ದುಂಟು –ಇವತ್ತು ಶಿವಾಜಿ ಮಹಾರಾಜರು ಇದ್ದಿದ್ದರೆ ಏನು ಮಾಡುತ್ತಿದ್ದರು– ಎಂದು. ಇದು ಚಿಂತನಕಾರ, ಅಂಕಣಕಾರ, ಉತ್ತಮ ಬರಹಗಾರ, ನನ್ನ ಮಿತ್ರ ಶ್ರೀಯುತ ಸತ್ಯೇಶ್ ಬೆಳ್ಳೂರ್, ಬೆಂಗಳೂರು, ಅವರಿಗೆ ಚೆನ್ನಾಗಿ ಗೊತ್ತು. ಬಹಳ ಕಾಲದಿಂದ ನನಗೆ ಶಿವಾಜಿಯ ಮೌಲ್ಯಗಳ ಬಗ್ಗೆ, ಇಂದಿನ ಯುಗಕ್ಕೆ ಅವುಗಳ ಪ್ರಸ್ತುತತೆ ಬಗ್ಗೆ

ಜೋಡಿಸಿ ಬರೆಯಲು ಪ್ರೇರೇಪಿಸುತ್ತಿದ್ದರೂ, ಬರೆಯುವ ಧೈರ್ಯ, ಸಕಾಲಿಕ ಸಮಯ ಒದಗಿ ಬರಲಿಲ್ಲ.

"ಶಿವಾಜಿ" ಎಂದಾಕ್ಷಣ ಬಹಳಷ್ಟು ಜನರ ಕಣ್ಣ ಮುಂದೆ ಬರುವುದು ಒಬ್ಬ ಮುಸ್ಲಿಮ್ ವಿರೋಧಿ, ಕಟ್ಟರ್ ಹಿಂದುತ್ವವಾದಿ, ಹಿಂದೂ ರಾಜ ಅನ್ನುವ ಪೂರ್ವಭಾವಿ ಮನಃಸ್ಥಿತಿ. ಅವರನ್ನು ನಾನು ದೂರುವುದಿಲ್ಲ. ಮೊದಲು ಬ್ರಿಟಿಷರು, ಅನಂತರ ಬಂದಿಳಿದ ಪಟ್ಟಭದ್ರ ಹಿತಾಶಕ್ತಿಗಳು ತಮ್ಮ ಬೇಳೆ ಬೇಯಿಸಲು ಶಿವಾಜಿಯನ್ನು ಹಾಗೇ ವಕ್ರವಾಗಿ ಪ್ರತಿಬಿಂಬಿಸುತ್ತಲೇ ಬಂದಿದ್ದಾರೆ. ಕಳೆದ ಮುನ್ನೂರೈವತ್ತು ವರ್ಷಗಳಿಂದಲೂ ವಾಸ್ತವ ವಿಷಯವೇನು, ನಿಜವೇನು ಎಂದು ಉದ್ದೇಶಪೂರ್ವಕ ವಾಗಿ ಜನಸಾಮಾನ್ಯರಿಗೆ ತುಲಾನಾತ್ಮಕವಾಗಿ ತಿಳಿಯುವ ಅವಕಾಶವನ್ನೇ ನೀಡಲಿಲ್ಲ.

ನೆಪೋಲಿಯನ್ ಮೇಲೆ ಸುಮಾರು ಐವತ್ತು ಸಾವಿರಕ್ಕಿಂತಲೂ ಅಧಿಕ ಪುಸ್ತಕಗಳನ್ನು ಬರೆದಿದ್ದಾರೆ. ಅವನೆಂದರೆ ಅಲ್ಲಿನ ಜನರು ಅಷ್ಟೊಂದು ಗೌರವ, ಪ್ರೀತಿ, ಪ್ರೇಮ, ಆದರದಿಂದ ಆರಾಧಿಸುತ್ತಾರೆ ಅಂತ ಎಲ್ಲೋ ಓದಿದ ನೆನಪು. ಆದರೆ ಹಿಮಾಲಯಕ್ಕಿಂತಲೂ ಮೇರು ವ್ಯಕ್ತಿತ್ವದ ಶಿವಾಜಿ ಮಹಾರಾಜರ ಮೇಲೆ ಅಲ್ಲೋ–ಇಲ್ಲೋ ಕೆಲವು ಕಡೆ ಹುಡಿಕಿದರೆ ಒಂದು ಐವತ್ತು–ನೂರು ಪುಸ್ತಕಗಳು ಸಿಗಬಹುದು; ಕನ್ನಡದಲ್ಲಂತೂ ಒಂದೈದು ಇರಬಹುದು. ಶಾಲಾ ಇತಿಹಾಸ ಪಠ್ಯಪುಸ್ತಕಗಳಲ್ಲೋ, ಶಿವಾಜಿಯ ಮೇಲೆ ಕೇವಲ ಒಂದು ಪುಟ, ಅದರಲ್ಲಿ ಅರ್ಧಕ್ಕರ್ಧ ಅವರ ಭಾವಚಿತ್ರ ತುಂಬಿಸುತ್ತಾರೆ, ಮಿಕ್ಕ ಅರ್ಧ ಪುಟದಲ್ಲಿ ಎಷ್ಟೊಂದು ಮಾಹಿತಿ ನೀಡಬಹುದು? ಉದ್ದೇಶಪೂರ್ವಕ ನಿರಾಕರಣೆ ಅಲ್ಲವೇ ಅದು? ಒಬ್ಬ ಪೋರ್ಚುಗೀಸ್ ವೈಸ್ರಾಯ್ (viceroy) ತನ್ನ ಚಕ್ರವರ್ತಿಗೆ ಜನವರಿ 28, 1666ರ ಒಂದು ಪತ್ರದಲ್ಲಿ ಶಿವಾಜಿಯನ್ನು ಅಲೆಕ್ಸಾಂಡರ್ (ಅಲೆಕ್ಸಾಂಡರ್–ದಿ ಗ್ರೇಟ್) ಮತ್ತು ಜೂಲಿಯಸ್ ಸೀಸರ್‌ನಿಗೂ ಹೋಲಿಸಿ, ಅವರೊಬ್ಬ ಪ್ರಚಂಡ ಸೇನಾನಿ, ಜನಾನುರಾಗಿ ಮೇಧಾವಿ ನಾಯಕ ಎಂದು ಹಾಡಿ ಹೊಗಳಿ ಬರೆದಿದ್ದಾರೆ. ಅಂತಹ ಶಿವಾಜಿ ಮಹಾರಾಜರ ಜೀವನ ಚರಿತ್ರೆಯನ್ನು ಎಲ್ಲರು ಓದಲೇಬೇಕು, "ಶಿವಾಜಿ" ಎಂಬ ಆ ಮೌಲ್ಯವನ್ನು ಇಪ್ಪತ್ತೊಂದನೇ ಶತಮಾನದಲ್ಲೂ ಅನ್ವಯಿಸಲು ಪ್ರಯತ್ನಿಸ ಬೇಕು.

ಶಿವಾಜಿ ಮಹಾರಾಜರ ಯಶೋಗಾಥೆ, ಅವರ ವ್ಯಕ್ತಿತ್ವದ ನಿದರ್ಶನಗಳು, ಅವರು ಪ್ರತ್ಯಕ್ಷ ನುಡಿದಂತೆ ನಡೆದು, ಹೆಜ್ಜೆಹೆಜ್ಜೆಗೂ ಮಾನವೀಯತೆ ಮೆರೆದು ಬಾಳಿ ಬದುಕಿದ ಪರಿ, ಎಲ್ಲವನ್ನು ಬರೆಯಲು ಸಾವಿರ ಪುಟಗಳಿದ್ದರೂ ಸಾಲದು. ಇವೆಲ್ಲ ಮಾಹಿತಿಗಳು ತಕ್ಷಣಕ್ಕೆ ಸಿಗದ ಕಾರಣ, "ಶಿವಾಜಿ" ಎಂದಾಕ್ಷಣ "ಮುಸ್ಲಿಮ್–ವಿರೋಧಿ" ಅಂತ ಜನರು ಅಸಡ್ಡೆಯಲ್ಲಿ ಮೂಗು ಮುರಿಯುವುದು, ಶಿವಾಜಿ ಭಕ್ತರಿಂದ ದೂರ ಸರಿಯುವುದು ಸ್ವಾಭಾವಿಕ. ಶಿವಾಜಿ ಎಂಬ ಮೌಲ್ಯ ಮೂರು

ನೂರ ಐವತ್ತು ವರ್ಷಗಳ ಹಿಂದೆ ನಮ್ಮ ದೇಶಕ್ಕೆ ಹೇಗೆ ಅನಿವಾರ್ಯವಾಗಿತ್ತೋ, ಹಾಗೇ ಅವರ ನೈತಿಕತೆಯ ಸ್ಫೂರ್ತಿ ನಮ್ಮ ದೇಶಕ್ಕೆ ಇಂದಿಗೂ ಅಷ್ಟೇ ಅವಶ್ಯಕ. ಅದರಲ್ಲಿ ಯಾವ ಗೊಂದಲವೂ ನನಗಿಲ್ಲ.

ಯಾವುದೇ ವ್ಯಕ್ತಿಯ ಯಶಸ್ಸಿನ ಹಿಂದೆ ಒಬ್ಬಳು ಮಹಿಳೆ ಇರುತ್ತಾಳೆ ಎನ್ನುವುದೊಂದು ಜಾಣ್ಣುಡಿ. ಅಂತೆಯೇ, ತಾಯಿ ಜೀಜಾಬಾಯಿಯವರು ಬೆಳೆಸಿದ ರೀತಿಯೇ ಅವರ ಆದರ್ಶ ಬಾಳಿನ ಭದ್ರ ಬುನಾದಿಯಾಯಿತು. ಆದರೆ, ಶಿವಾಜಿ ಮಹಾರಾಜರನ್ನು "ಶಿವಾಜಿ" ಎಂಬ ಮೌಲ್ಯವನ್ನಾಗಿಸಲು ಅನೇಕ ಜನರ ಬಲಿದಾನವಿದೆ, ಅನೇಕರ ನಿಸ್ವಾರ್ಥಸೇವೆಯಿದೆ, ಅಸಂಖ್ಯ ಜನಸಾಮಾನ್ಯರ ಪರಿಶ್ರಮವಿದೆ. ಅವರನ್ನು ರಕ್ಷಿಸಲು, ಅನೇಕರು, ಒಂದೇ–ಎರಡೇ, ನೂರಾರು ಮಂದಿ ಜನಸಾಮಾನ್ಯರು ತಮ್ಮ ಪ್ರಾಣವನ್ನೇ ತೆತ್ತಿದ್ದಾರೆ. ಅಂತಹ ಮಹನೀಯರ ನಿಸ್ವಾರ್ಥಸೇವೆಯ ಗುಣಗಾನ ಬಿಡಿ, ಅವರ ಹೆಸರು ಕೂಡ ಇತಿಹಾಸದಲ್ಲಿ ಕಂಡುಬರುವುದಿಲ್ಲ. ಯಾರೂ ಕಾಣದ, ಯಾರೂ ಮೆಚ್ಚದ, ವನಕುಸುಮದಂತೆ ತಮ್ಮ ಸೇವೆ ಸಲ್ಲಿಸಿ, ಸದ್ದಿಲ್ಲದೇ ಮರೆಯಾಗಿದ್ದಾರೆ. ಶಿವಾಜಿಯ ಕುರಿತು ಕನ್ನಡದಲ್ಲಿ ಪುಸ್ತಕಗಳು ವಿರಳವಾಗಿದ್ದರಿಂದ, ಅವರ ಜೊತೆಯಲ್ಲಿ ಶ್ರಮಿಸಿದವರ ಬಗ್ಗೆಯಂತೂ, ಏನೇನೂ ದಾಖಲೆಗಳಿಲ್ಲ ಎನ್ನಬಹುದು. ಅಂತಹವರೆಲ್ಲರನ್ನು ಹೃದಯಾಳದಿಂದ ಒಮ್ಮೆ ನೆನಪಿಸಿ, ಅವರೆಲ್ಲರ ಕಾರ್ಯ–ಕೈಂಕರ್ಯಗಳನ್ನು ಶ್ಲಾಘಿಸಿ, ಇಂದಿನ ಪೀಳಿಗೆಗೂ ಮತ್ತು ಮುಂದಿನ ಜನಾಂಗಕ್ಕೂ ಸ್ಫೂರ್ತಿಗಾಗಿ ಎಂದು ಒಂದು ಕಡೆ ಕೂಡಿಡುವುದು ಅತ್ಯಗತ್ಯವೆನಿಸಿತು. ಅಂತೆಯೇ, ಒಬ್ಬೊಬ್ಬ ವ್ಯಕ್ತಿಗಳ ವಿಚಾರವಾಗಿ ಒಂದೊಂದು ಅಂಕಣಗಳು ಮೂಡಿಬಂದವು.

ಇದನ್ನು ಬರೆಯಲು ನನಗೆ ಅನೇಕ ಐತಿಹಾಸಕ ಪುಸ್ತಕಗಳನ್ನು ಪರಾಂಬರಿಸ ಬೇಕಾಯಿತು, ಪ್ರಮುಖವಾಗಿ:

1. ಛತ್ರಪತಿ ರಾಜಾರಾಮ ಮಹಾರಾಜರು ಜಿಂಜಿ ಕೋಟೆಯಲ್ಲಿದ್ದಾಗ, ಅವರ ಆದೇಶದ ಮೇರೆಗೆ ಕೃಷ್ಣಾಜಿ ಅನಂತ ಸಭಾಸದ್ ಅವರು 1697ರಲ್ಲಿ ಬರೆದ ಮರಾಠಿ 'ಬಖರ' (ಗದ್ಯ ರೂಪದ ಇತಿಹಾಸ ನಿರೂಪಣೆ) ಸಭಾಸದ್ ಬಖರವೆಂದೇ ಪ್ರಖ್ಯಾತ; ಇದು ಶಿವಾಜಿ ಮಹಾರಾಜರ ಜೀವನ ಚರಿತ್ರೆಯ ಮೊತ್ತಮೊದಲ ಗ್ರಂಥ ದಾಖಲೆ. ಶಿವಾಜಿ ಮಹಾರಾಜರ ಆಡಳಿತದಲ್ಲಿ ಕೆಲಸ ಮಾಡಿದ್ದವರಲ್ಲಿ ಒಬ್ಬರಾದ ಸಭಾಸದ್ ಅವರು, ಅವರ ಸಮಕಾಲೀನ ರಾಗಿದ್ದರಿಂದ, ಇದು ಒಂದು ಪ್ರಾಮಾಣಿಕ ಇತಿಹಾಸ ನಿರೂಪಣೆ ಎನ್ನಬಹುದು. ಇದು ಅನೇಕ ಭಾಷೆಗಳಿಗೆ ತರ್ಜುಮೆಯಾಗಿದೆ. ನಾನು ಉಲ್ಲೇಖಿಸಿದ್ದು ಅದರ ಇಂಗ್ಲಿಷ್ ತರ್ಜುಮೆಯನ್ನು.

2. ಛತ್ರಪತಿ ಶಾಹು–2 ಮಹಾರಾಜರ ಆಸ್ಥಾನದಲ್ಲಿ ಹಿರಿಯ ಲೇಖಕರಾಗಿದ್ದ ಮಲ್ಹಾರ್ ರಾಮರಾವ್ ಚಿಟ್ನಿಸ್ ಅವರು 1811ರಲ್ಲಿ ಬರೆದ ಮರಾಠಿ 'ಬಖರ' ("ಶಕಕರ್ತೆ ಛತ್ರಪತಿ ಶಿವಾಜಿ ಮಹಾರಾಜ್ ಯಾಂಚಿ ಸಪ್ತ ಪ್ರಕರಣಾತ್ಮಕ ಚರಿತ್ರೆ") ಅವರ ಮುತ್ತಜ್ಜ ಚಿಟ್ನಿಸ್ ಅವರು ಶೇಖರಿಸಿದ ದಾಖಲೆಗಳ ಆಧಾರದ ಮೇಲೆ ಬರೆದ ಇತಿಹಾಸ. ಇದು ಶಿವಾಜಿ ಮಹಾರಾಜರ ಮೃತ್ಯುವಿನ ನೂರಾಮೂವತ್ತು ವರ್ಷಗಳ ನಂತರ ಬರೆದ ದಾಖಲೆಯಾದ್ದರಿಂದ, ಇದರಲ್ಲಿ ಹಲವಾರು ಉತ್ಪ್ರೇಕ್ಷೆಗಳು ನುಸುಳಿಕೊಂಡಿವೆ ಮತ್ತು ಹಲವಾರು ನಿರೂಪಣೆಗಳಿಗೆ ದಾಖಲೆ ಆಧಾರವಿಲ್ಲ. ಅಷ್ಟರಲ್ಲಿ ಶಿವಾಜಿ ಮಹಾರಾಜರನ್ನು ದೈವತ್ವಕ್ಕೇರಿಸಿದ ಅವರ ಅಭಿಮಾನಿಗಳು ಹಾಡಿದ, ಬಾಯಿಂದ ಬಾಯಿಗೆ ಹರಡಿದ ಕಥೆಗಳೂ, ಸೇರಿಕೊಂಡಿವೆ ಎಂದು ಹಲವಾರು ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕೆಲವು ಇತಿಹಾಸ ತಜ್ಞರು ಬಖರವನ್ನು ಊಹಾಪೋಹಗಳ ಸರಮಾಲೆಯೆಂದು ತಿರಸ್ಕರಿಸಿದರೂ, ಅವುಗಳು ಸಮಕಾಲೀನ ಮಹನೀಯರು ಬರೆದಿದ್ದರಿಂದ, ಅವುಗಳಲ್ಲಿ ನಮೂದಿಸಿದ ವಿಷಯಗಳನ್ನು ಅಲ್ಲಗಳೆಯುವಂತಿಲ್ಲ. ಪರಾಮರ್ಶಿಸಲು ಲಿಖಿತ ಪುರಾವೆಗಳು ಸಿಗದಿದ್ದರೂ, ಸ್ವೀಕರಿಸಬೇಕಾಗುತ್ತದೆ ಎಂದು ಇನ್ನಿತರ ಇತಿಹಾಸ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

3. ಶ್ರೀ ಸಭಾಸದರ ಬಖರವನ್ನು ಇಂಗ್ಲಿಷಿಗೆ ಅನುವಾದಿಸಿ, ಅದಕ್ಕೆ ಚಿಟ್ನಿಸ್ ಅವರ ಬಖರದ ಮತ್ತು 'ಶಿವದಿಗ್ವಿಜಯ'ದಿಂದ ಎತ್ತಿದ ಸಾರಗಳನ್ನು ಜೋಡಿಸಿ, ಮತ್ತು ತಮ್ಮದೇ ಆದ ಟಿಪ್ಪಣಿಗಳನ್ನು ಕೊಟ್ಟು ಇತಿಹಾಸದ ಪ್ರಾಧ್ಯಾಪಕ ಶ್ರೀ ಸುರೇಂದ್ರನಾಥ ಸೇನರು ಬರೆದಂತಹ "GIFT OF SIVA CHHATRA PATI" ಎಂಬ ಇತಿಹಾಸ ಗ್ರಂಥವನ್ನು 1920ರಲ್ಲಿ ಕೋಲ್ಕತ್ತಾ ವಿಶ್ವವಿದ್ಯಾನಿಲಯದವರು ಪ್ರಕಾಶಿಸಿದರು. ಇತಿಹಾಸದ ವಿದ್ಯಾರ್ಥಿಗಳನ್ನು ಶ್ರೋತೃರನ್ನಾಗಿಟ್ಟುಕೊಂಡು ಬರೆದಂತಹ ಗ್ರಂಥವು, ಮರಾಠಿ ಬಖರವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಬಹು ಉಪಯೋಗಿ.

4. ಜೇಮ್ಸ್ ಗ್ರಾಂಟ್ ಡಫ್ (ಜ. ಜುಲೈ 8, 1789– ಮ. ಸೆಪ್ಟೆಂಬರ್ 23, 1858) ಒಬ್ಬ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯ ಸೈನಿಕಾಧಿಕಾರಿ ಮತ್ತು ಭಾರತದಲ್ಲಿ ಕಾರ್ಯಶೀಲನಾಗಿದ್ದ. ಅವನು 1818ರಲ್ಲಿ ಪೇಶ್ವೆ ಬಾಜೀರಾವ್–IIರ ಯುದ್ಧದಲ್ಲಿ ಭಾಗವಹಿಸಿದ್ದನು, ಮರಾಠ ಸಾಮ್ರಾಜ್ಯದ ಪತನದ ನಂತರ, ಅವರ ರಾಜಧಾನಿ ಸತಾರದಲ್ಲಿ ಬ್ರಿಟಿಷರ ನಿವಾಸಿ ರಾಯಭಾರಿ ಅಧಿಕಾರಿಯಾಗಿದ್ದನು. ಅನಾರೋಗ್ಯದ ನಿಮಿತ್ತ ಐದು ವರ್ಷಗಳ ನಂತರ ಸ್ಕಾಟ್ಲ್ಯಾಂಡಿಗೆ ಮರಳುವಾಗ, ಅವನು ಅನೇಕ ಐತಿಹಾಸಿಕ ದಾಖಲೆಗಳ ಭಂಡಾರವನ್ನೇ

ಸಂಗ್ರಹಿಸಿ ತನ್ನೊಡನೆ ಹಡಗಿನಲ್ಲಿ ತೆಗೆದುಕೊಂಡು ಹೋಗಿದ್ದನು. ಅವುಗಳನ್ನು ಪರಿಶೀಲಿಸಿ, ಶಿವಾಜಿ ಮಹಾರಾಜರ ಮೇಲೆ, ಮರಾಠ ಸಾಮ್ರಾಜ್ಯದ ಮೇಲೆ "A History of the Mahrattas" ಎಂಬ ಇತಿಹಾಸ ಗ್ರಂಥವನ್ನು ಬರೆದಿದ್ದಾನೆ. 1826ರಲ್ಲಿ ಪ್ರಕಾಶಿತವಾದದ್ದು ಮತ್ತು ಭಾರತದ ಅನೇಕ ಭಾಷೆಗಳಿಗೆ ಅನುವಾದ ಗೊಂಡ ಇತಿಹಾಸ ಗ್ರಂಥ. ಇದನ್ನು ಕ್ಯಾಲಿಫೋರ್ನಿಯಾ ಯೂನಿವರ್ಸಿಟಿಯ ಗ್ರಂಥಾಲಯದಿಂದ ಏನು ಶುಲ್ಕವಿಲ್ಲದೆ ಕೆಳಭರಣ (download) ಮಾಡ ಬಹುದು. ಸುಮಾರಾಗಿ, ಎಲ್ಲರು ಇದನ್ನೇ ಅವಲಂಬಿಸಿ, ಶಿವಾಜಿಯ ಜೀವನ ಚರಿತ್ರೆಯನ್ನು ಬರೆಯುವವರೆಲ್ಲರೂ, ಇದನ್ನು ಉಲ್ಲೇಖಿಸುತ್ತಾರೆ. ಅವನೊಡನೆಯೇ, ಅನೇಕ ಅಮೂಲ್ಯ ಮೂಲ ದಾಖಲೆಗಳು ಭಾರತದಿಂದ ಮಾಯವಾದವು. ಜೇಮ್ಸ್ ಗ್ರಾಂಟ್‌ನು, ಬಹುತೇಕ ಮರಾಠಿ ಬಖರವನ್ನು ಅವಲಂಬಿಸಿ ಮತ್ತು ಅದನ್ನು ಲಿಖಿತ ಪುರಾವೆ ದಾಖಲೆಗಳೊಡನೆ ಪರಿಶೀಲಿಸಿ, ಶಿವಾಜಿಯ ಶತ್ರುಗಳು ಬರೆದ ಪತ್ರ ದಾಖಲೆಗಳನ್ನೇ ಹೆಚ್ಚು ನಂಬುತ್ತಿದ್ದನೋ ಏನೋ, ಕೆಲವೊಮ್ಮೆ ಶಿವಾಜಿಯನ್ನು ಅಷ್ಟೊಂದು ಗೌರವದ ಅಭಿಪ್ರಾಯವಿರದೆ ಮಾಡಿದ ಕೆಲವೊಂದು ವಾದಗಳು ಸಮಂಜಸವಲ್ಲ. ಆದ್ದರಿಂದ, ಗ್ರಾಂಟ್ ಡಫ್ ಬರೆದ ವಿಚಾರಗಳನ್ನು ಇತರೆ ಪುಸ್ತಕಗಳಿಗೆ ಹೋಲಿಸಿ, ಪರಿಶೀಲಿಸಿ, ಸತ್ಯವನ್ನು ಪುನರ್ ಪ್ರಮಾಣಿಸಬೇಕಾಗುತ್ತದೆ.

5. ನ್ಯಾ. ಶ್ರೀ ಮಹಾದೇವ ಗೋವಿಂದ ರಾನಡೆ, ಬ್ರಿಟಿಷ್ ಕಾಲದ ನ್ಯಾಯಾಧೀಶರು, "Rise of the Maráthá Power" ಎನ್ನುವ ಸಂಕ್ಷಿಪ್ತ ಗ್ರಂಥವನ್ನು ಮರಾಠ ಸಾಮ್ರಾಜ್ಯದ ಮೇಲೆ ಬರೆದಿದ್ದಾರೆ. 1900ರಲ್ಲಿ ಪ್ರಕಾಶಿತವಾದದ್ದು. ಅವರು ಹೇಳಿಕೊಂಡ ಹಾಗೆ, ಈ ಇತಿಹಾಸ ಗ್ರಂಥವನ್ನು ಅವರು ಭಾರತೀಯ ದೃಷ್ಟಿಕೋನದಿಂದ, ಗ್ರಾಂಟ್ ಡಫ್‌ರಂತಹ ಬ್ರಿಟಿಷ್ ಇತಿಹಾಸಕಾರರು ಶಿವಾಜಿ ಮಹಾರಾಜರ ಬಗ್ಗೆ ಮಾಡಿಕೊಂಡಿರುವ ಅನೇಕ ತಪ್ಪು ಕಲ್ಪನೆಗಳನ್ನು, ವಕ್ರ ವಿಚಾರಗಳನ್ನು ಸ್ಪಷ್ಟಗೊಳಿಸುವ ಅನಿವಾರ್ಯತೆಯನ್ನು ಮನಗಂಡು, ಬರೆದರು. ಈ ಗ್ರಂಥದಲ್ಲಿ ನ್ಯಾ. ಶ್ರೀ ರಾನಡೆಯವರು ಎರಡು ವಿಚಾರಗಳನ್ನು ಉತ್ತಮ ವಾಗಿ ಸಾಬೀತು ಮಾಡಿದ್ದಾರೆ: ಒಂದು, ಮರಾಠ ಸಾಮ್ರಾಜ್ಯ ಸುಸಮಯಗಳ ಸಂಯೋಜನೆಯಿಂದಾದ ಅವಕಾಶವಾದಿ ಅಪಘಾತವೇನಲ್ಲ; ಅದೊಂದು ಹಿಂದೂ ರಾಷ್ಟ್ರವನ್ನು ಸ್ಥಾಪಿಸುವ ಒಂದು ಪರಿಶುದ್ಧ ಪ್ರಯತ್ನವೇ ಆಗಿತ್ತು. ಅದು ಕೇವಲ ಒಂದು ಸ್ವತಂತ್ರ ಸ್ವರಾಜ್ಯ ಪ್ರತಿಪಾದಿಸಲಲ್ಲ, ಆದರೆ ಹಿಂದೆಂದೂ ಯಾರೂ ಪ್ರಯತ್ನಿಸಿರದ ದೇಶಭಕ್ತಿಯಿಂದ ಜೋಡಿಸಲ್ಪಟ್ಟ ಮೈತ್ರಿ ರಾಜ್ಯಗಳ ಒಕ್ಕೂಟ ಸ್ಥಾಪಿಸುವ ಮಹಾನ್ ಕಾರ್ಯವೇ ಆಗಿತ್ತು. ಎರಡು, ಮರಾಠ ಸಾಮ್ರಾಜ್ಯದ ಯಶಸ್ಸು ಎಲ್ಲ ವರ್ಗದ ಜನಸಾಮಾನ್ಯರ ಒಗ್ಗಟ್ಟಿನಿಂದಾದ ಸಾಮಾಜಿಕ, ಆಧ್ಯಾತ್ಮಿಕ, ಮತ್ತು ರಾಜಕೀಯ ಕ್ರಾಂತಿಗಳಿಂದಾಗಿ ಸಿಕ್ಕಿದ ಫಲ.

ಅನೇಕ ವಿಫಲಗಳಿಂದ ಧೃತಿಗೆಡದೆ, ಅದರಿಂದ ಕಲಿತ ಉನ್ನತ ಸದ್ಗುಣಗಳ ಪಾಠವೇ ಆ ಯಶಸ್ಸಿನ ಮರ್ಮವೆಂದು ಪ್ರತಿಪಾದಿಸಿದ್ದಾರೆ.

6. ನಾನು ಬಹಳ ಇಷ್ಟಪಟ್ಟ ಶಿವಾಜಿಯ ಜೀವನ ಚರಿತ್ರೆಯ ಪುಸ್ತಕವೆಂದರೆ ಶ್ರೀ ರಂಜಿತ್ ದೇಸಾಯಿಯವರ "ಶ್ರೀಮಾನ್ ಯೋಗಿ" (1984ರಲ್ಲಿ ಪ್ರಕಾಶಿತ) –ಈ ಸುಮಾರು ಒಂದು ಸಾವಿರ ಪುಟಗಳ ಬೃಹತ್ ಗ್ರಂಥದಲ್ಲಿ ಶಿವಾಜಿಯ ಜೀವನ ಚರಿತ್ರೆ, ಅವರು ಬಾಳಿ ಬದುಕಿದ ರೀತಿ ಒಂದು ಕಾದಂಬರಿಯಂತೆ, ಅಲಂಕರಣೆಗಳ ವೈಪರೀತ್ಯವಿಲ್ಲದೆ, ಸುಂದರವಾಗಿ ನಿರೂಪಿಸಿದ್ದಾರೆ. ಅದರಲ್ಲಿ ಓದಿದ ಕೆಲವು ಅದ್ಭುತ ಘಟನೆಗಳೇ ಇಲ್ಲಿನ ಕೆಲವು ಲೇಖನಗಳ ಸ್ಫೂರ್ತಿ. ಓದುವಾಗ ಕಣ್ಮುಂದೆಯೇ ಒಂದು ಚಲನಚಿತ್ರದಂತೆ ಪ್ರತ್ಯಕ್ಷವಾಗಿ ಕಥೆ ನಡೆಯುತ್ತಿದೆಯೋ ಎಂಬಂತೆ ಅನುಭವವಾಗುವ ಈ ಕಾದಂಬರಿ ಕೆಲವೊಂದು ಭಾಗಗಳಲ್ಲಿ ಗದ್ಗದಿತನನ್ನಾಗಿಸುತ್ತದೆ. ಕೆಲವೊಂದು ರೋಮಾಂಚನಕಾರಿ ಪರಿಸ್ಥಿತಿಯಿಂದ ಮಹಾರಾಜರು ಚಮತ್ಕಾರದಿಂದ ಪಾರಾಗಿದ್ದ ಕ್ಷಣಗಳಲ್ಲಿ ಹೃದಯ ಬಡಿತ ಡವಡವ ತೀವ್ರವಾಗುತ್ತವೆ. ಈ ಅವಸ್ಥೆಯನ್ನು ಅನೇಕ ಸಲ ಅನುಭವಿಸಿದ್ದೇನೆ.

7. ಶ್ರೀ ಚಾರ್ಲ್ಸ್ ಅಗಸ್ಟಸ್ ಕಿಂಚಾಯ್ಡ್ (1870–1954) ಅವರು, ಶ್ರೀ ದತ್ತಾತ್ರೇಯ ಬಲವಂತ ಪರಸನಿಸ್ ಜೊತೆಗೂಡಿ 'The History of the Maratha People' ಎಂಬ ಮೂರು ಸಂಪುಟಗಳ (1918, 1922 ಮತ್ತು 1925ರಲ್ಲಿ ಪ್ರಕಾಶಿತ) ಬೃಹತ್ ಇತಿಹಾಸ ಗ್ರಂಥ ಬರೆದಿದ್ದಾರೆ. ಇವುಗಳಲ್ಲಿ ಹಲವು ಅಮೂಲ್ಯ ವಿಚಾರಗಳು ಲಭಿಸಿದವು.

8. ಸರ್ ಜಾದುನಾಥ ಸರ್ಕಾರರು (1870–1958) ಮರಾಠಿ ಬಖರವನ್ನು 'ಏನೇನೂ ಆಧಾರವಿಲ್ಲದ ಊಹಾಪೋಹಗಳ ಹರಟೆ, ಯಾರೋ ಅಫೀಮು ತಿಂದು ಬರೆದಂತಿದೆ' ಎಂದು ಅಪಮಾನಿಸಿದರೂ, ಅವರು ಪರ್ಷಿಯನ್, ಮರಾಠಿ ಮತ್ತು ಹಿಂದಿ ಭಾಷೆಯಲ್ಲಿ ಲಭ್ಯವಾದ ಪತ್ರಗಳು ಮತ್ತು ಇಂಗ್ಲಿಷರು, ಪೋರ್ಚುಗೀಸ್ ಮತ್ತು ಡಚ್ಚರ ದಾಖಲೆಗಳನ್ನು ಪರಾಮರ್ಶಿಸಿ, ಅಂದರೆ ಶಿವಾಜಿ ಮಹಾರಾಜರ ವೈರಿಗಳ ಪತ್ರ ದಾಖಲೆಗಳನ್ನೇ ಹೆಚ್ಚು ಅವಲಂಬಿಸಿ ಬರೆದಂತಹ ಅನೇಕ ಇತಿಹಾಸ ಗ್ರಂಥಗಳನ್ನು ಉಲ್ಲೇಖಿಸಬೇಕಾಗುತ್ತದೆ. ಅದರಲ್ಲಿ Shivaji and his Times (1919) ಪ್ರಾಮುಖ್ಯವಾದದ್ದು. ಶಹ ಜಹಾನ, ಔರಂಗಜೇಬ, ಮುಹಮ್ಮದ್ ಅದಿಲಶಾಹಿ ಮತ್ತು ಅಲಿ ಅದಿಲಶಾಹಿ, ಮಿರ್ಜಾ ರಾಜೇ ಜೈಸಿಂಗ್ ಅವರಂತಹ, ಶಿವಾಜಿಯನ್ನು ಅತ್ಯಂತ ದ್ವೇಷಿಸಿದವರ ದಾಖಲೆಗಳನ್ನೇ ಅವಲಂಬಿಸಿ ಬರೆದ ವಿಮರ್ಶಾತ್ಮಕ ಇತಿಹಾಸ ಗ್ರಂಥ. ಜಾದುನಾಥರು ಸಭಾಸದ ಮತ್ತು ಚಿಟ್ನಿಸರ ಬಖರಗಳನ್ನು, ಗ್ರಾಂಟ್ ಡಫ್

ಮತ್ತು ಚಾರ್ಲ್ಸ್ ಅಗಸ್ಟಸ್ ಕಿಂಚಾಯ್ಡ್ ಎಲ್ಲರು ಬರೆದ ಇತಿಹಾಸ ಗ್ರಂಥಗಳನ್ನು ಎಡಗೈಯಿಂದ ತಳ್ಳಿಹಾಕುತ್ತಾರೆ. ಅವರಿಗೆ ಅವರದೇ ಕಾರಣಗಳಿದ್ದರೂ, ಶಿವಾಜಿ ಮಹಾರಾಜರನ್ನು ಭಕ್ತಿ–ಪ್ರೀತಿಯಿಂದ ಆರಾಧಿಸುವ ನಮಗೆ ಜಾದುನಾಥರು ಮಂಡಿಸಿದ ಕೆಲವೊಂದು ವಿಚಾರಗಳನ್ನು ನಿರ್ಲಕ್ಷಿಸಬೇಕಾಗುತ್ತದೆ. ಕಿಂಚಾಯ್ಡ್ ಮತ್ತು ಜಾದುನಾಥರು ಇತಿಹಾಸವನ್ನು ವಿಶ್ಲೇಷಿಸಿದ ರೀತಿ ಮತ್ತು ನಿರೂಪಿಸಿದ ಶೈಲಿಗಳು ಪರಸ್ಪರ ವೈರುಧ್ಯತೆಯ ಅತಿರೇಕವೆನ್ನಬಹುದು. ಆದರೂ, ಸರ್ ಜಾದುನಾಥ ಸರ್ಕಾರರು ಶಿವಾಜಿ ಮಹಾರಾಜರ ಬಗ್ಗೆ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ "ಶಿವಾಜಿಯು ತಮ್ಮ ಕಾರ್ಯದಿಂದಲೇ, ಹಿಂದೂಗಳು ಒಂದು ದೇಶವನ್ನು ಕಟ್ಟಿ, ಬೆಳೆಸಿ, ತಮ್ಮ ಎಲ್ಲ ವೈರಿಗಳನ್ನು ಸೋಲಿಸಿ, ಒಂದು ಸಾಮ್ರಾಜ್ಯವನ್ನು ಸ್ಥಾಪಿಸಬಹುದೆಂದು ಸಾಬೀತು ಮಾಡಿದ್ದಾರೆ; ಅವರು ರಕ್ಷಣಾತ್ಮಕವಾಗಿಯೂ ತಮ್ಮನ್ನು ಸಂರಕ್ಷಿಸಿ, ಕಲೆ, ಸಾಹಿತ್ಯ, ಮತ್ತು ಕವಿ ಕಾವ್ಯಗಳನ್ನು ಪ್ರೋತ್ಸಾಹಿಸಿದರು; ಅವರು ವಾಣಿಜ್ಯ ಮತ್ತು ಕೈಗಾರಿಕಾ ಉದ್ಯಮಗಳಿಗೆ ಇಂಬು ನೀಡಿದರು. ಅವರು ತಮ್ಮದೇ ಆದ ನೌಕಾಪಡೆಯನ್ನು ಕಟ್ಟಿ, ಸ್ಥಳೀಯ ಕೌಶಲ್ಯದಿಂದಲೇ ಸಾಗರೋತ್ತರ ಉಲ್ಲಂಘನಾ ಯೋಗ್ಯ ನೌಕಾ ಹಡಗುಗಳನ್ನು ನಿರ್ಮಿಸಿ, ಅನೇಕ ವಿದೇಶಿಯರೊಡನೆ ಸಮಬಲದಿಂದ ನೌಕಾಯುದ್ಧಗಳನ್ನು ಹೋರಾಡಬಲ್ಲಷ್ಟು ಶಕ್ತಿಯನ್ನು ಬೆಳೆಸಿಕೊಂಡರು; ಅವರು ಆಧುನಿಕ ಹಿಂದುಗಳಿಗೆ ತಮ್ಮ ಉನ್ನತ ಸ್ಥಾನಮಾನ, ವ್ಯಕ್ತಿತ್ವ, ಎತ್ತರ ನಿಲುವು ಮತ್ತು ಘನತೆಯನ್ನು ಬೆಳೆಸಿಕೊಳ್ಳುವ ಮನೋಸ್ಥೈರ್ಯವನ್ನು ತುಂಬಿದರು. ಅವರು ಹಿಂದುತ್ವವೆಂಬ ಮಹಾನ್ ವೃಕ್ಷವು ಅಮರವೆಂದೂ, ಅದು ಹಿಂದಿನಂತೆ ಪುನಃ ಚಿಗುರಿ, ರೆಂಬೆಗಳು ಟಿಸಿಲೊಡೆದು, ಗಗನಚುಂಬಿ ಹೆಮ್ಮರವಾಗಿ ಬೆಳೆಯಬಲ್ಲುದೆಂದು ತೋರಿಸಿಕೊಟ್ಟರು" ಎಂದು ಬರೆದಿದ್ದಾರೆ.

9. ಶ್ರೀ ಎಚ್.ಎಸ್. ಸರ್ದೇಸಾಯಿಯವರು ಬರೆದ ನಾಲ್ಕು ಸಂಪುಟಗಳ ಬೃಹತ್ ಇತಿಹಾಸ ಗ್ರಂಥ, 'Shivaji, The Great Maratha' ಅನೇಕ ಮೂಲ ದಾಖಲೆಗಳನ್ನು ಸಂಶೋಧಿಸಿ ಬರೆದ ಉತ್ತಮ ದರ್ಜೆಯ ಇತಿಹಾಸ ಗ್ರಂಥ. ಇದು ಅನೇಕ ವಿಚಾರಗಳನ್ನು ಪರಾಮರ್ಶಿಸಲು ಸಹಾಯಕಾರಿಯಾಯಿತು.

10. ಶ್ರೀ ಗೋವಿಂದ ಸಖಾರಾಮ್ ಸರ್ದೇಸಾಯಿ (ಜಿ.ಎಸ್. ಸರ್ದೇಸಾಯಿ) ಅವರ 1946ರಲ್ಲಿ ಪ್ರಕಟಗೊಂಡ ಬೃಹತ್ ಗ್ರಂಥ "The New History of Marathas" ಮೊದಲನೆಯ ಸಂಪುಟವು 1600–1707ರವರೆಗಿನ ಮರಾಠ ಇತಿಹಾಸ ಕುರಿತಾಗಿಯೂ, ಎರಡನೆಯ ಸಂಪುಟವು 1707–1772ರವರೆಗಿನ ಮರಾಠ ಇತಿಹಾಸವನ್ನು ಮತ್ತು ಮೂರನೆಯ ಸಂಪುಟವು ತದನಂತರದ 1772–1848 ಇತಿಹಾಸವನ್ನು ಸವಿಸ್ತಾರವಾಗಿ ಬರೆದಿದ್ದಾರೆ. ಅನೇಕ ಪೂರ್ವಗ್ರಹ

ನಿರೂಪಣೆಯನ್ನು ದಾಖಲೆಗಳ ಆಧಾರದ ಮೇಲೆ ಅಲ್ಲಗಳೆದು, ನಿಜವಾದ ಇತಿಹಾಸವನ್ನು ತಿಳಿಸಿದ್ದಾರೆ. ಅವರ ಈ ಮೂರೂ ಸಂಪುಟಗಳು ಆಗಾಗ್ಗೆ ಓದಲೇ ಬೇಕಾದ ಗ್ರಂಥಗಳು.

11. ಕೊಲ್ಹಾಪುರದ ರಾಜಾರಾಮ್ ಕಾಲೇಜಿನ ಪ್ರಾಂಶುಪಾಲ ಮತ್ತು ಪ್ರಾಧ್ಯಾಪಕರಾಗಿದ್ದ ಶ್ರೀ ಬಾಲಕೃಷ್ಣರು ಅತ್ಯಂತ ಮುತುವರ್ಜಿಯಿಂದ ಮೂಲ ದಾಖಲೆಗಳನ್ನು ಶೋಧಿಸಿ, ಅವುಗಳ ಆಧಾರದ ಮೇಲೆ ಬರೆದಂತಹ ಇತಿಹಾಸ ಗ್ರಂಥ 'SHIVAJI THE GREAT' 1932ರಲ್ಲಿ ಪ್ರಕಾಶಿತವಾಯಿತು. ಇದರಲ್ಲಿ ಉತ್ಪ್ರೇಕ್ಷೆಗಳಿಲ್ಲದ ಕಥಾ ನಿರೂಪಣೆ ಕಾಣಬಹುದು.

12. ಶ್ರೀ ವಿ.ಸ್. ಬೇಂದ್ರೆಯವರು ಬರೆದ 'Coronation of Shivaji the Great' ಎಂಬ ಗ್ರಂಥವು ಶಿವಾಜಿ ಮಹಾರಾಜರ ಪಟ್ಟಾಭಿಷೇಕವನ್ನು ಒಬ್ಬ ಪ್ರತಿಷ್ಠಿತ ಹಿಂದೂ ರಾಜನಾಗಿ ಕಾಶಿಯ ಗಗಾಭಟ್ಟರು ಶಾಸ್ತ್ರಪೂರ್ವಕವಾಗಿ ಹೇಗೆ ನಡೆಸಿದರು ಎಂಬುದನ್ನು ಹೆಜ್ಜೆಹೆಜ್ಜೆಯಾಗಿ ಓದುಗರ ಕಣ್ಮುಂದೆಯೇ ನಡೆಯುವಂತೆ ಬರೆದಿದ್ದಾರೆ. ಈ ರಾಜ್ಯಾಭಿಷೇಕವು ಸಾಂಸ್ಕೃತಿಕ, ರಾಜಕೀಯ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ಐತಿಹಾಸಿಕ ಘಟನೆಯಾದ್ದರಿಂದ, ಅದನ್ನು ಕೇವಲ ಮರಾಠಿ ಭಾಷೆ ಬಲ್ಲ ಜನರಿಗೆ ಸೀಮಿತವಾಗದೆ, ಇತರ ಎಲ್ಲ ಭಾಷೆಯ ಜನರಿಗೂ ಲಾಭವಾಗಿಸಲು, ಅವರು ಅದನ್ನು ಇಂಗ್ಲಿಷಿನಲ್ಲಿ ಚೆನ್ನಾಗಿ ವಿವರಿಸಿ, ಸಂಸ್ಕೃತ ಶ್ಲೋಕಗಳನ್ನು ಉಲ್ಲೇಖಿಸಿ, ಲೋಕೋಪಯೋಗಿ ಕಾರ್ಯ ಮಾಡಿದರು. ಇದು 1960ರಲ್ಲಿ ಪ್ರಕಾಶಿತವಾದ ಇತಿಹಾಸ ಗ್ರಂಥ.

13. ಮುಂಬಯಿನ ವಿಲ್ಸನ್ ಕಾಲೇಜಿನ ಪ್ರಾಧ್ಯಾಪಕ ಶ್ರೀ ಎನ್.ಎಸ್.ತಕಖವ ಅವರು 1921ರಲ್ಲಿ ಬರೆದ 'The Life of Shivaji Maharaj' ಎಂಬ ಇತಿಹಾಸ ಗ್ರಂಥವು ಜಾದುನಾಥರ ಅನೇಕ ಪೂರ್ವಗ್ರಹ ವಿಶ್ಲೇಷಣೆಯನ್ನು ಆಧಾರ ಸಮೇತ ಅಲ್ಲಗಳೆದಿದ್ದಾರೆ. ಇದು ಶ್ರೀ ಜಾದುನಾಥರ ಗ್ರಂಥಕ್ಕೆ ಶ್ರೀ ತಕಖವ ಅವರು ನೀಡಿದ ಉತ್ತಮ ಪ್ರತ್ಯುತ್ತರವೆನ್ನಬಹುದು.

14. ಡಾ. ಶಿವ್ ಗಜರಾನಿ ಮತ್ತು ಡಾ. ಎಸ್. ರಾಮ್ ಅವರ "ಶಿವಾಜಿ" ಎಂಬ ಇಂಗ್ಲೀಷ್ ಪುಸ್ತಕದಲ್ಲಿ ಅನೇಕ ಘಟನೆಗಳನ್ನು ಚೆನ್ನಾಗಿ ನಿರೂಪಿಸಿದ್ದಾರೆ. ಇದನ್ನು ಬರೆಯುವಾಗ ಲೇಖಕದ್ವಯರು ಅನೇಕ ಮರಾಠಿ, ಸಂಸ್ಕೃತ, ಪರ್ಷಿಯನ್, ಇಂಗ್ಲೀಷು, ಪೋರ್ಚುಗೀಸ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಪ್ರಕಾಶಿತ ಅನೇಕ ಮೂಲ ಗ್ರಂಥಗಳನ್ನು ಅವಲಂಬಿಸಿ ಬರೆದಂತಹ ಅತ್ಯುತ್ತಮ ಗ್ರಂಥ. ಇವರದು ಅನೇಕ ಮರಾಠಿ ಬಖರಗಳನ್ನು, ಮರಾಠಿ ಪೌಢಗಾಯನಗಳನ್ನು ಕಡೆಗಣಿಸಿ, ಕೇವಲ ದಾಖಲೆಗಳಿಂದ ಪರಾಮರ್ಶಿಸಬಲ್ಲ ಗ್ರಂಥಗಳನ್ನೇ ಆಧರಿಸಿ ಬರೆದಂತಹ ಗ್ರಂಥವಿದು.

15. ಶ್ರೀ ಕೆ.ಆರ್.ಸುಬ್ರಮಣಿಯನ್ ಅವರು ಬರೆದ "The Maratha Rajas of Tanjore" ಎಂಬ 1928ರಲ್ಲಿ ಪ್ರಕಟವಾದ ಗ್ರಂಥ.

16. "The Deliverance or the Escape of Shivaji the Great from Agra" ರಾವ್ ಸಾಹೇಬ್ ಜಿ.ಕೆ. ಯಾನೆ, ಶ್ರೀ ಬಾಬಾಸಾಹೇಬ್ ದೇಶಪಾಂಡೆ, ಆಗಿನ ಪೊಲೀಸ್ ಮಹಾಧಿಕಾರಿ, ಇಂಟೆಲಿಜೆನ್ಸ್ ಬ್ಯುರೋ, ಹೋಂ ಡಿಪಾರ್ಟ್‌ಮೆಂಟ್, ಭಾರತ ಸರ್ಕಾರ, ಅವರು 1929ರಲ್ಲಿ ಪ್ರಕಟಿಸಿದ ಈ ಮುನ್ನೂರು ಪುಟದ ಪುಸ್ತಕದಲ್ಲಿ ಶಿವಾಜಿ ಮಹಾರಾಜರು ಆಗ್ರಾ ಸೆರೆಮನೆಯಿಂದ ಚಮತ್ಕಾರವಾಗಿ ತಪ್ಪಿಸಿಕೊಂಡು ಹೋದ ಘಟನೆಯನ್ನು ದಾಖಲೆ ಸಮೇತ ಪ್ರಸ್ತಾಪಿಸಿದ್ದಾರೆ.

17. ಶ್ರೀ ವಿ. ವ್ರಿದ್ಧಗಿರಿಸನ್ ಅವರು ಬರೆದ "Nayaks of Tanjore" ಎಂಬ ಗ್ರಂಥ, 1942ರಲ್ಲಿ ಪ್ರಕಟಣೆ; ಪುಟ 166.

18. ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ಮುನ್ನೂರನೇ ವರ್ಷದ ಸಂಭ್ರಮದಲ್ಲಿ ಸ್ವಾಮಿ ವಿವೇಕಾನಂದ ಕೇಂದ್ರ ಪತ್ರಿಕೆಯವರು 1974ರಲ್ಲಿ ಪ್ರಕಟಿಸಿದ 'Shivaji in Stories' ಎಂಬ ಕಥಾಸಂಗ್ರಹದಲ್ಲಿ ಶಿವಾಜಿ ಮಹಾರಾಜರ ಚರಿತ್ರೆಯ ಅಮೂಲ್ಯ ಘಟನೆಗಳನ್ನು ಮೆಲುಕು ಹಾಕಿದ್ದಾರೆ. ಇದು ಇವತ್ತಿಗೂ ಅವರ ಅಂತರ್ಜಾಲದಲ್ಲಿ ಲಭ್ಯ.

19. ಲೋಕಮಾನ್ಯ ಶ್ರೀ ಬಾಲಗಂಗಾಧರ ತಿಲಕರು 1886ರಲ್ಲಿ ಸಂಸ್ಥಾಪಿಸಿದ ಶ್ರೀ ಶಿವಾಜಿ ರಾಯಗಢ ಸ್ಮಾರಕ ಮಂಡಳಿಯು (SSRSM), ರಾಯಗಢ ಸಂಸ್ಥೆಯ ಅಂತರ್ಜಾಲ ಮಾಹಿತಿ.

20. "History of the Marathas" - ಡಾ. ಎ.ಆರ್. ಕುಲಕರ್ಣಿ, ಶ್ರೀ ಜಿ.ಎನ್. ದೇಶಪಾಂಡೆ, ಸ್ನೇಹವರ್ಧನ ಪಬ್ಲಿಕೇಷನ್ಸ್ (1979).

21. 'Shivaji and The Indian National Movement', Anamikha Wordpress (ಶಿವಾಜಿ ಮತ್ತು ಭಾರತೀಯ ರಾಷ್ಟ್ರೀಯ ಚಳವಳಿ, ಅನಾಮಿಕ ವರ್ಡ್ ಪ್ರೆಸ್) ಅಧ್ಯಾಯ–4, ಶ್ರೀ ಅನಿಲ್ ಸಮರ್ಥ್.

22. ತ್ರಿಪುರ ಮತ್ತು ಮೇಘಾಲಯ ರಾಜ್ಯಗಳ ರಾಜ್ಯಪಾಲರಾಗಿದ್ದ ಶ್ರೀ ತಥಾಗತ ರಾಯ್ ಅವರ ಬ್ಲಾಗ್ "ಟಾಗೋರ್, ಛತ್ರಪತಿ ಶಿವಾಜಿ ಮತ್ತು ಭಗವಾ" ಲೇಖನ.

23. ಶ್ರೀ ಅನೀಶ್ ಗೋಖಲೆ ಅವರು ಬರೆದ ಆಂಗ್ಲಭಾಷೆಯ ಗ್ರಂಥ "ಸಹ್ಯಾದ್ರಿ ಟು ಹಿಂದೂಕುಷ್" (Sahyadri to Hindukush, by Shri Anish Gokhale), 2016 ಮತ್ತು ಅವರ ಶಿವಾಜಿ ಮತ್ತು ಮರಾಠರ ಇತಿಹಾಸದ ಕುರಿತು ಬರೆದ ಅನೇಕ ಲೇಖನಗಳು.

24. MILITARY SYSTEM OF THE MARATHA, WITH A BRIEF ACCOUNT OF THEIR MARITIME ACTIVITIES BY SURENDRANATH SEN (1925), LECTURER IN HISTORY, CALCUTTA UNIVERSITY.

ಇವೆಲ್ಲ ಪುರಾತನ ಇತಿಹಾಸ ಹಾಗೂ ನೂತನ ಗ್ರಂಥಗಳನ್ನು ಅವಲೋಕಿಸಿ, ನಡೆದ ಘಟನೆಗಳನ್ನು, ವಿಚಾರಗಳನ್ನು ಮಂಡಿಸಲು ಅತ್ಯಂತ ಸಹಾಯಕಾರಿಯಾಗಿವೆ.

ಫ್ರಾಂಸೊಯ್ಸ್ ಗೋತಿಯಾರ್ (Francois Gautier) ಅವರು, ಫ್ರೆಂಚ್ ದೇಶದವರಾದರೂ, ಭಾರತೀಯ ಇತಿಹಾಸ, ಹಿಂದೂ ಧರ್ಮ ಮತ್ತು ನಮ್ಮ ಪರಂಪರೆಯ ಪ್ರಚಂಡ ಅಭಿಮಾನಿ. ಅವರು ಅನೇಕ ವರ್ಷಗಳಿಂದ ಭಾರತದಲ್ಲೇ ವಾಸವಾಗಿದ್ದಾರೆ. ಅವರು ಅಪಾರ ಪರಿಶ್ರಮದಿಂದ ಪುಣೆಯಲ್ಲಿ ನಿರ್ಮಿಸಿದ ಶ್ರೀ ಛತ್ರಪತಿ ಶಿವಾಜಿ ಮಹಾರಾಜ್ ಸಂಗ್ರಹಾಲಯದಲ್ಲಿ ಅನೇಕ ಪುರಾತನ ಪತ್ರಲೇಖಗಳು, ಅನೇಕ ಸುಂದರ ಚಿತ್ರ ಕಥೆಗಳು ಇತ್ಯಾದಿ ಪ್ರದರ್ಶನಕ್ಕಿಟ್ಟಿದ್ದಾರೆ. ಅದರಿಂದ ಅನೇಕ ಅಮೂಲ್ಯ ಮಾಹಿತಿಗಳನ್ನು ಕಲೆ ಹಾಕಬಹುದು. ಅಲ್ಲಿಯೇ, ಶ್ರೀ ಭವಾನಿ ಮಾತೆಯ ಎದುರು ಮಂಡಿಯೂರಿ ಭವಾನಿ ಖಡ್ಗವನ್ನು ವರಪ್ರಧಾನವಾಗಿ ಸ್ವೀಕರಿಸುವ ಒಂದು ಭವ್ಯ ಮೂರ್ತಿಯನ್ನು ಸ್ಥಾಪಿಸಿದ್ದಾರೆ. ಈ ಶಿವಾಜಿ ದೇವಾಲಯದಲ್ಲಿ ಪ್ರತಿನಿತ್ಯ ತ್ರಿಕಾಲ ಪೂಜೆಯುಂಟು. ಅವರ ಶಿವಾಜಿ ಭಕ್ತಿಯೆದುರು ನಾವೆಲ್ಲ ಭಾರತೀಯರು ಮೂಕ ವಿಸ್ಮಿತರು.

ಶಾಲೆಯ ವಾರ್ಷಿಕ ರಜೆಯೆಂದರೆ, ಯಾವುದಾದರೊಂದು ಶಿವಾಜಿಯ ಐತಿಹಾಸಿಕ ಕ್ಷೇತ್ರವನ್ನೋ, ದುರ್ಗಮಕೋಟೆಗಳ ಅವಶೇಷಗಳನ್ನೋ ನೋಡಬೇಕೆನ್ನುವ ತುಡಿತ. ನನ್ನ ಮನಸ್ಸಿಗೆ ಬೇಸರವಾಗಬಾರದೆಂದು ನನ್ನ ಒತ್ತಾಯದ ಚಾರಣ ಕೈಂಕರ್ಯಗಳಿಗೆ ಮುನಿಸದೆ ನನ್ನೊಡನೆ ಸಹಕರಿಸಿ, ನಾನು ಕರೆದೊಯ್ದ ಮರಾಠ ಇತಿಹಾಸ ಪಳೆಯುಳಿಕೆ ಪ್ರದೇಶಗಳಿಗೆ ನನ್ನ ಜೊತೆಗೂಡಿ, ತಮ್ಮ ರಜಾಕಾಲವನ್ನು ನಗುನಗುತ್ತಲೇ ತ್ಯಾಗ ಮಾಡಿದ ನನ್ನಿಬ್ಬರು ಮಕ್ಕಳು ಅಪರ್ಣ ಮತ್ತು ಶಿವಾನಿ ಅವರ ಸಹಕಾರವನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ನನಗೋ, ಬೆಟ್ಟದಷ್ಟು ಕೆಲಸಗಳ ನಡುವೆ ಸಿಗುತ್ತಿದ್ದಿದ್ದೇ ಏಳೆಂಟು ದಿನಗಳ ರಜೆ. ಅಷ್ಟರಲ್ಲೇ ಶಿವಾಜಿ ಮಹಾರಾಜರ ಕ್ಷೇತ್ರಗಳನ್ನು ಕಣ್ಣಾರೆ ನೋಡಿ ಬರಬೇಕೆಂಬ ನನ್ನ ಹಂಬಲವೇ ಗೆಲ್ಲುತ್ತಿತ್ತು. ತಮ್ಮ ಸಹಪಾಠಿಗಳು ಸಿಂಗಾಪುರ, ಯುರೋಪ್ ಅಥವಾ ಇನ್ನಾವುದೋ ವಿದೇಶಿ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಿ ಬಂದ ರಂಜನೀಯ ಕತೆಗಳನ್ನು ಹೇಳಿದರೆ, ಇವರು ಧಗಧಗಿಸುವ ಬೇಸಿಗೆಯ ಬಿಸಿಲಿನಲ್ಲಿ ಬಳಲಿ ಶಿವಾಜಿ ಮಹಾರಾಜರ ಐತಿಹಾಸಿಕ ಪ್ರದೇಶಗಳನ್ನು ಕಣ್ಣಾರೆ ಕಂಡ ಅನುಭವವನ್ನು ಹಂಚಿಕೊಳ್ಳುತ್ತಿದ್ದರಂತೆ.

ಹಾಗೇ ನನ್ನ ಪತ್ನಿ ಸುಪರ್ಣ ಅವಳೂ ಒಮ್ಮೆಯೂ ಪ್ರಶ್ನಿಸದೆ, ನನ್ನೊಡನೆ ಹೆಜ್ಜೆ ಹಾಕಿ ನಡೆದು ನನ್ನ ಶಿವಾಜಿ ಅನ್ವೇಷಣೆಯಲ್ಲಿ ಸಹಕರಿಸಿದ ಪರಿ ಇಲ್ಲಿ ಸ್ಮರಿಸಬೇಕು. ರಾಯಗಢ ಕೋಟೆಯೊಳಗೆ ರಾಜಬೀದಿಯ ಇಕ್ಕೆಲಗಳಲ್ಲಿರುವ ಅಂಗಡಿಯ ಸಾಲುಗಳ ಅವಶೇಷದಲ್ಲಿ ಶಿವಾಜಿ ಮಹಾರಾಜರ ಪಾದಗಳನ್ನು ಚುಂಬಿಸಿರಬಹುದಾದ ಕಲ್ಲುಗಳ ಅದೃಷ್ಟವನ್ನು ಹೀಗೆ ಮಾತನಾಡುತ್ತಾ ನಡೆದು ಕೊಂಡು ಬರುವಾಗ, ಸದ್ದಿಲ್ಲದಂತೆ ಒಂದೆರಡು ಶಿಲೆಗಳ ಚಿಕ್ಕ ತುಂಡುಗಳನ್ನು ಹೆಕ್ಕಿ ಕೈಚೀಲದಲ್ಲಿಟ್ಟುಕೊಂಡು ಮುಂಬಯಿಗೆ ಹಿಂತಿರುಗಿದ ನಂತರ ನನ್ನ ಕೈಯಲ್ಲಿ ಟ್ಟಿದ್ದಳು. ಅದನ್ನು ಕಪಾಟಿನಲ್ಲಿಟ್ಟು ಜೋಪಾನವಾಗಿ ಇಂದಿಗೂ ಇಟ್ಟುಕೊಂಡಿದ್ದೇನೆ. ಹೀಗೆ ಶಿವಾಜಿ ಮಹಾರಾಜರ ಹಿಂದವೀ ಸ್ವರಾಜ್ಯದ ಕಣಕಣದಲ್ಲಿಯೂ ಶಂಕರನನ್ನು ಅನುಭವಿಸಬಹುದು. ಶಿವಾಜಿ ಮಹಾರಾಜರು ಮೆಟ್ಟಿದ ಆ ಭೂಮಿ ಅಷ್ಟೊಂದು ಪವಿತ್ರ.

ಶಿವಾಜಿ ಎಂದರೆ ಅಷ್ಟು ಭಕ್ತಿ ಮೂಡಲು ಒಂದು ರೀತಿಯಲ್ಲಿ ನನ್ನ ತಾಯಿಯೇ ಕಾರಣ ಎನ್ನಬಹುದು. ನಾನು ಮಿಡ್ಲ್ ಸ್ಕೂಲ್‌ನಲ್ಲಿ ಇದ್ದಾಗ (ಆರರಿಂದ ಎಂಟನೇ ತರಗತಿಯವರೆಗೆ) ನಮ್ಮ ಕಳಸದ ಶ್ರೀ ಶಕ್ತಿ ಗಣಪತಿ ಮಂಡಳಿಯವರು ಸಂಯೋಜಿಸುತ್ತಿದ್ದ ಅನೇಕ ಆಟೋಟ ಸ್ಪರ್ಧೆಗಳಲ್ಲಿ ಮತ್ತು ದೇಶಭಕ್ತಿ ಪ್ರಬಂಧಗಳನ್ನು ಬರೆಯುವ ಸ್ಪರ್ಧೆಗಳಲ್ಲಿ ಭಾಗವಹಿಸಲು ವರ್ಷಕ್ಕೊಮ್ಮೆ ಅವಕಾಶ ಸಿಗುತಿತ್ತು. ಒಮ್ಮೆ ನಮೂದಿಸಿದ ನಾಲ್ಕು ದೇಶಭಕ್ತ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರ ಕುರಿತು ಲಘು ಪ್ರಬಂಧ ಬರೆಯುವ ಸ್ಪರ್ಧೆಯಿತ್ತು. ಬರೆಯಲು ಸುಮಾರು ಮೂವತ್ತು ನಿಮಿಷಗಳ ಕಾಲಾವಕಾಶವಿತ್ತು. ನಮ್ಮ ಮೇಷ್ಟ್ರು, ಲೋ ಗುಂಡ, ನೀನು ಸಂಘದವ ನಲ್ಲವೇ? ನಿನಗೆ ಶಿವಾಜಿಯ ಮೇಲೆ ಪ್ರಬಂಧ ಬರೆಯಲು ಸಾಧ್ಯವೇ? ಎಂದು ಕೇಳಿದ್ದರು. ವಿಷಯ ಸಂಗ್ರಹಕ್ಕೆ ಕೇವಲ ಒಂದು ದಿನದ ಅವಕಾಶವಿತ್ತು.

ಆಗ ನಮ್ಮ ತಾಯಿಯವರು, ಮನೆಗೆಲಸ ಬೆಟ್ಟದಷ್ಟಿದ್ದರೂ ರಾಷ್ಟ್ರೋತ್ಥಾನ ಪರಿಷತ್ತಿನವರ ಭಾರತ ಭಾರತಿ ಪುಸ್ತಕ ಮಾಲೆಯಲ್ಲಿ ಶಿವಾಜಿ ಎನ್ನುವ ಕಿರು ಹೊತ್ತಗೆಯನ್ನು ತೆಗೆದುಕೊಂಡು, ಅದನ್ನು ಗಟ್ಟಿಯಾಗಿ ಓದಿ, ಅದರೊಳಗಿನ ಮುಖ್ಯವಾದ ಕೆಲವು ಸಂಗತಿಗಳನ್ನು ಬರೆಯುವಂತೆ ನನಗೆ ತಿಳಿಹೇಳಿದ್ದರು. ಅದನ್ನು ರಾತ್ರಿಯೊಳಗೆ ಒಂದೆರಡು ಬಾರಿ ಓದಿಕೊಂಡು, ಕೆಲವೊಂದು ಅಂಶಗಳನ್ನು ಕಂಠಪಾಠ ಮಾಡಿ, ಪ್ರಬಂಧ ಸ್ಪರ್ಧೆಯಲ್ಲಿ ಹಾಗೇ ಬರೆದಿದ್ದೆ. ನನಗೆ ದ್ವಿತೀಯ ಬಹುಮಾನ ದೊರಕಿತ್ತು. ಮಹಾತ್ಮಾ ಗಾಂಧಿಯವರ ಮೇಲೆ ಬರೆದ ಪ್ರಬಂಧಕ್ಕೆ ಪ್ರಥಮ ಬಹುಮಾನ, ಆದರೆ ಯಾರಿಗೆ ಸಿಕ್ಕಿತ್ತೆಂದು ಈಗ ನೆನಪಿಲ್ಲ. ಬಹುಮಾನ ಸಿಕ್ಕಿದ್ದಕ್ಕೆ ನನಗಿಂತಲೂ ಹೆಚ್ಚು ನಮ್ಮ ತಾಯಿ ಸಂಭ್ರಮಿಸಿದ್ದರು.

ಅಂದಿನಿಂದ ಶಿವಾಜಿ ಮಹಾರಾಜರೆಂದರೆ ನಮ್ಮ ದೇಶವನ್ನು ಮತ್ತು

ಧರ್ಮವನ್ನು ರಕ್ಷಿಸಿದ ಮಹಾನ್ ವ್ಯಕ್ತಿ, ಕಲಿಯುಗದ ಅವತಾರ ಪುರುಷ ಎಂದೇ ನನಗೆ ಪ್ರಬಲವಾದ ನಂಬಿಕೆ. ಆ ನಂಬಿಕೆಗೆ ಬೀಜ ಬಿತ್ತಿ ಬೇರೂರಲು ಅನುವು ಮಾಡಿಕೊಟ್ಟ ನಮ್ಮ ತಾಯಿ ಶ್ರೀಮತಿ ರಾಧಾಬಾಯಿ ಅವರನ್ನು ವಂದಿಸಿ ಇಲ್ಲಿ ಸ್ಮರಿಸುತ್ತೇನೆ.

ಇದನ್ನು ಬರೆಯಲು ನನ್ನನ್ನು ಪ್ರೋತ್ಸಾಹಿಸಿ, ನನ್ನ ಬರಹವನ್ನು ತಿದ್ದಿ, ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶನ ಮಾಡಿದ, ಖ್ಯಾತ ಅಂಕಣಕಾರ, ಕವಿ, ಚಿಂತನಕಾರ, ಉತ್ತಮ ಬರೆಹಗಾರ, ನನ್ನ ಮಿತ್ರ ಶ್ರೀಯುತ ಸತ್ಯೇಶ್ ಬೆಳ್ಳೂರ್, ಬೆಂಗಳೂರು ಅವರಿಗೆ ಚಿರಋಣಿ. ಅವರು ಈ ಪುಸ್ತಕವನ್ನು ಮುದ್ರಿಸಲು ಮಾಡಿದ ಸಹಾಯವನ್ನು ಎಂದೂ ಮರೆಯುವಂತಿಲ್ಲ.

ಅನೇಕ ಪುನರಾವರ್ತನೆಗಳ ಹೊರತಾಗಿಯೂ, ಅನನುಭವಿಯಾದ ನನ್ನ ಕನ್ನಡ ಅಕ್ಷರ ಮತ್ತು ಕಾಗುಣಿತ ಪ್ರಮಾದಗಳನ್ನು ಹಿತವಾಗಿ ನಗುನಗುತ್ತಲೇ ಸರಿಗೊಳಿಸಿ, ಹೀಗೆ ಮಾಡಿದರೆ ಸರಿಹೋಗುತ್ತೇನೋ ನೋಡಿ ಎಂದು ಅನೇಕ ಬಾರಿ ಸಲಹೆ ನೀಡುತ್ತಲೇ, ಅಚ್ಚುಕಟ್ಟಾಗಿ ವಾಕ್ಯಗಳನ್ನು ತಿದ್ದಿ, ಅಕ್ಷರ ಜೋಡಣೆ ಮಾಡಿದ ಹೊಸಪೇಟೆಯ 'ಯಾಜಿ ಪ್ರಕಾಶನ'ದ ಶ್ರೀ ಗಣೇಶ ಯಾಜಿ ಮತ್ತು ಶ್ರೀಮತಿ ಸವಿತಾ ಯಾಜಿಯವರಿಗೆ ಅನಂತ ಕೃತಜ್ಞತೆಗಳು.

ಈ ಪುಸ್ತಕಕ್ಕೆ ಅಂದವಾದ ಮುಖಪುಟ ವಿನ್ಯಾಸ ಮಾಡಿದ ಶ್ರೀ ರವೀಂದ್ರ ಅ ವಿಶ್ವಜ್ಞ ಅವರಿಗೂ ಮತ್ತು ಚಂದವಾಗಿ ಮುದ್ರಿಸಿ ಪ್ರಕಾಶಿಸಿದ ವಿವಿಡ್ಲಿಪಿ ಸಂಸ್ಥಾಪಕರಿಗೂ ನಾನು ಚಿರಋಣಿ.

ಈ ಗ್ರಂಥದ ಪ್ರಕಟಣೆಯು ಶಿವಾಜಿ ಮಹಾರಾಜರ ರಾಜ್ಯಾಭಿಷೇಕದ ಮೂರು ನೂರ ಐವತ್ತನೆಯ ವಾರ್ಷಿಕೋತ್ಸವ ಆಚರಣೆಯ ವರ್ಷದಲ್ಲಿಯೇ ಸಂಭವಿಸು ತ್ತಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ. ಇದು ಓದುಗರ ಹೃದಯದಲ್ಲಿ ಶಿವಾಜಿ ಮಹಾರಾಜರೆಂದರೆ ಒಂದು ರೀತಿಯ ಚಿರಋಣಿಯ ಭಕ್ತಿ ಭಾವವನ್ನು ಬಿತ್ತಿದರೆ ನನ್ನ ಪ್ರಯತ್ನ ಸಾರ್ಥಕ.

ನವೆಂಬರ್ 3, 2023 –ಉಡುಪಿ **ಗುರುಪ್ರಸಾದ ಭಟ್**

ಎರಡನೆಯ ಮುದ್ರಣಕ್ಕೆ ಮುನ್ನ ನನ್ನೆರಡು ಮಾತುಗಳು

ಕನ್ನಡ ವಾಚಕ ಪ್ರಭುಗಳಿಗೆ ಮೊದಲು ವಂದನೆಗಳನ್ನು ಅರ್ಪಿಸಿ, ಎರಡನೆಯ ಮುದ್ರಣಕ್ಕೆ ಮುನ್ನ ನನ್ನೆರಡು ಮಾತುಗಳನ್ನು ವ್ಯಕ್ತಪಡಿಸಲು ಬಯಸುತ್ತೇನೆ.

'ಛತ್ರಪತಿ – ನಾ ಕಂಡಂತೆ ಶಿವಾಜಿ' ಎಂಬ ಕೃತಿಯು ಇಷ್ಟು ಬೇಗನೆ, ಅದೂ ಕೇವಲ ಒಂದು ತಿಂಗಳಿನಲ್ಲಿಯೇ, ಅಚ್ಚಾದ ಎಲ್ಲ ಪ್ರತಿಗಳು ಖರ್ಚಾಗಿ, ಎರಡನೆಯ ಮುದ್ರಣಕ್ಕೆ ಅಣಿಯಾಗುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಇತ್ತೀಚಿಗೆ ಜನರಲ್ಲಿ, ಮುಖ್ಯವಾಗಿ ಕನ್ನಡಿಗರಲ್ಲಿ, ಪುಸ್ತಕಾದಿ ಗ್ರಂಥಗಳನ್ನು ಕೊಂಡು ಓದುವಂತಹ ಪ್ರವೃತ್ತಿಯು ಗಮನೀಯವಾಗಿ ಕುಂಠಿತಗೊಂಡಿದೆಯೆಂದು ಹಲವರ ವಾದ ಒಂದು ಕಡೆಯಾದರೆ, ಒಳ್ಳೆಯ ಪುಸ್ತಕಗಳನ್ನು ನೀಡಿದರೆ ಖಂಡಿತವಾಗಿಯೂ ಅವರು ಅದನ್ನು ಖರೀದಿಸಿ ಓದುವುದು ಮಾತ್ರವಲ್ಲದೆ, ತಮ್ಮ ಅಭಿಪ್ರಾಯವನ್ನು ಮುಖತಃ ತಿಳಿಸುವ ವ್ಯವಧಾನವನ್ನೂ ಹೊಂದಬಲ್ಲವರೆಂದು ಈ ಗ್ರಂಥದ ಲೋಕಾರ್ಪಣೆ ಯಾದ ಸ್ವಲ್ಪಕಾಲದಲ್ಲಿಯೇ ನನಗೆ ಅರಿವಾಗಿದೆ. ನನ್ನ ಚೊಚ್ಚಲ ಕೃತಿಗೆ ಇಷ್ಟೊಂದು ಗೌರವಾದರಗಳು ದೊರೆತಿದ್ದು ನನ್ನ ಪೂರ್ವಜನ್ಮದ ಸುಕೃತವೇ ಸರಿ. ಇನ್ನೊಂದು ದೃಷ್ಟಿಯಲ್ಲಿ, ಈ ಗೌರವದ ಮೂಲಕಾರಣ ನಮ್ಮ ದೇಶ ಕಂಡ ಅತ್ಯದ್ಭುತ ಹಿಂದೂ ಚಕ್ರವರ್ತಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಕುರಿತಾಗಿ ಬರೆದ ಈ ಗ್ರಂಥವು, ದೇಶಭಕ್ತ ಓದುಗರನ್ನು ಸ್ವಾಭಾವಿಕವಾಗಿಯೇ ಅವರಡೆ ಆಯಸ್ಕಾಂತದಂತೆ ಸೆಳೆಯಿತೆಂದು ಹೇಳಬಹುದು. ಶಿವಾಜಿ ಮಹಾರಾಜರ ಕುರಿತು ಸಮಗ್ರ ಮಾಹಿತಿಗಳನ್ನು ಒಂದು ಗ್ರಂಥದಲ್ಲಿಯೇ ಓದಲು ದೊರೆತಿರುವುದರಿಂದಲೇ ಅನೇಕ ಓದುಗರು ತಮ್ಮ ಸದಭಿಪ್ರಾಯವನ್ನು ತಿಳಿಸಿದ್ದಾರೆ. ಈ ಐತಿಹಾಸಿಕ ಬರೆಹವನ್ನು ಓದುಗರು ಮೆಚ್ಚಿ ಆಶೀರ್ವದಿಸಿದ್ದು ನನ್ನ ವಿಶ್ವಾಸವನ್ನು ಇನ್ನಷ್ಟು ವೃದ್ಧಿಸಿದೆ. ಈ ತುಂಬು ಹೃದಯದ ಶ್ಲಾಘನೆಯ ಬಹುಪಾಲು ಎಲ್ಲವೂ ನನ್ನ ಆರಾಧ್ಯದೈವ ಶಿವಾಜಿ ಮಹಾರಾಜರ ವ್ಯಕ್ತಿತ್ವಕ್ಕೆ ಸಲ್ಲಬೇಕೇ ಹೊರತು, ನನ್ನ ಬರೆಹದ ಕೊಡುಗೆ ತೃಣಮಾತ್ರ. 'ಶಿವಾಜಿ' ಎಂಬ ಕಥಾವಸ್ತುವೇ ಅಂತಹದು. 'ಹಿಂದವೀ ಸ್ವರಾಜ್ಯ' ಸ್ಥಾಪಕ ಶಿವಾಜಿ ಮಹಾರಾಜರು ಇಂದಿಗೂ ಪ್ರಸ್ತುತ.

ಈ ಸಂಭ್ರಮದಲ್ಲಿ ನನ್ನನ್ನು ಬರಹಗಾರನಾಗಿ ಕೈಹಿಡಿದು ಮಾರ್ಗದರ್ಶನ ಮಾಡಿ, ಹೃದಯಪೂರ್ವಕವಾಗಿ ಮುನ್ನುಡಿ ಬರೆದು, ನನ್ನನ್ನು ಲೇಖಕನಾಗಿ ಬೆಳೆಸಿದ ನನ್ನ ಆಪ್ತ ಸ್ನೇಹಿತ, ಸಾಹಿತಿ, ವಿದ್ವಾಂಸ, ಮ್ಯಾನೇಜ್ಮೆಂಟ್ ಗುರು, ಕವಿಶ್ರೇಷ್ಠ ಮತ್ತು ಸರಳ ಸಜ್ಜನಿಕೆಯ ಮೂರ್ತರೂಪ ಬೆಂಗಳೂರಿನ ಶ್ರೀ ಸತ್ಯೇಶ್ ಬೆಳ್ಳೂರ್ ಅವರಿಗೆ ಇನ್ನೊಮ್ಮೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಗ್ರಂಥ ಲೋಕಾರ್ಪಣೆಯ ಅಧ್ಯಕ್ಷ ಭಾಷಣದ ಕೊನೆಯಲ್ಲಿ ಅವರು ರಚಿಸಿ ಹಾಡಿದ ಈ ಚೌಪದಿಯನ್ನು ಮರೆಯಲಾಗದು. ಕೇಳಿದಾಗಲೆಲ್ಲ ಅತ್ಯಂತ ಮುದ ನೀಡುತ್ತಿದೆ.

ಹೊರಗಡೆಯ ಮಾಹಿತಿಯ ಗಡಿಯೊಳಗೆ ವಿರಮಿಸದೆ
ಅರಸುತ್ತ ಶೋಧಿಸುತ ಛತ್ರಪತಿಯನ್ನು
ಸರಿದಾರಿಯಲ್ಲವರ ಜಗಕೆ ಪರಿಚಯಿಸಿದವ
ಗುರುಪ್ರಸಾದ ಭಟ್ಟನೆಲೊ– ನವ್ಯಜೀವಿ

ಸಮಾರಂಭದ ಎರಡು ದಿನ ಮುಂಚಿತವಾಗಿಯೇ ಬೆಂಗಳೂರಿನಿಂದ ಉಡುಪಿಗೆ ಆಗಮಿಸಿ, ಮುತುವರ್ಜಿಯಿಂದ ಎಲ್ಲಾ ಏರ್ಪಾಡುಗಳನ್ನು ಗಮನಿಸಿ, ವ್ಯವಸ್ಥಿತವಾಗಿ ಎಲ್ಲವನ್ನು ಸುಗಮಗೊಳಿಸುವ ಮುಂದಾಳುತನ ಎಷ್ಟು ಜನರಲ್ಲಿಂದು ಕಾಣಬಹುದು? ಸುಸೂತ್ರವಾಗಿ ಜರುಗಿದ ಕಾರ್ಯಕ್ರಮದ ಕೊನೆಯಲ್ಲಿ ಎಲ್ಲರಿಗಿಂತ ಹೆಚ್ಚು ಸಂತೋಷಪಟ್ಟವನು, ಸತ್ಯೇಶನೇ! ನಾಲ್ಕು ದಶಕಕ್ಕೂ ಮೀರಿದ ನಮ್ಮ ಸ್ನೇಹ ಕಾಲಾತೀತ ಮತ್ತು ಆಪ್ತತೆ ಚಿರನೂತನ. ಸಹಪಾಠಿ ಹುಡುಗುತನದಲ್ಲಿ ಬೆಳೆದು ಬಲಿತ ಆತ್ಮೀಯತೆ ಇಂದಿಗೂ ಹಾಗೆಯೇ ಚಲಿಸುತ್ತಿರುವುದು ಹೃದಯವನ್ನು ಬೆಚ್ಚಗೆಗೊಳಿಸುತ್ತದೆ.

'ಛತ್ರಪತಿ – ನಾ ಕಂಡಂತೆ ಶಿವಾಜಿ' ಕೃತಿಗೆ ನಮ್ಮ ನಾಡಿನಾದ್ಯಂತ ಒಳ್ಳೆಯ ಪ್ರತಿಕ್ರಿಯೆ ಮೂಡಿಬಂದಿದೆ. ಜನವರಿ 2023, 19ರಿಂದ 21ನೇ ತಾರೀಖಿನವರೆಗೆ ಆಯೋಜಿಸಲಾದ ಮೂರು ದಿನಗಳ ಅಂತಾರಾಷ್ಟ್ರೀಯ 'ಮಂಗಳೂರು ಸಾಹಿತ್ಯದ ಹಬ್ಬ' (Mangaluru LitFest) ಆರನೇ ಆವೃತ್ತಿಯ ಸಮಾರಂಭದಲ್ಲಿ ದೇಶಾದ್ಯಂತ ಸಾಹಿತ್ಯಾಸಕ್ತರು, ಪ್ರಖ್ಯಾತ ಲೇಖಕರು, ನಾಡಿನ ಹೆಸರಾಂತ ನೃತ್ಯ–ನಾಟಕ–ಗಾಯನ ಕಲಾವಿದರು ಮತ್ತು ಚಿಂತಕರ ನಡುವೆ 'ಶಿವಾಜಿ – ಒಂದು ಅವಲೋಕನ' ಎಂಬ ಶೀರ್ಷಿಕೆಯಡಿ ಈ ಕೃತಿಯ ಕುರಿತಾಗಿ ವಿಚಾರ ವಿಮರ್ಶೆ ಮತ್ತು ಇಪ್ಪತ್ತೊಂದನೆಯ ಶತಮಾನದಲ್ಲಿ ಶಿವಾಜಿ ಮಹಾರಾಜರ ಪ್ರಸ್ತುತತೆಯ ಬಗ್ಗೆ ಉಪನ್ಯಾಸ ನೀಡುವ ಅವಕಾಶವೊಂದು ದೊರೆತಿತ್ತು. ಸಾಹಿತ್ಯ ಲೋಕದಲ್ಲಿ ಅಂಬೆಗಾಲನ್ನಿಡುತ್ತಿರುವ ನನಗೆ ಕನಸಿನಲ್ಲಿಯೂ ನಿರೀಕ್ಷಿಸಿರದ ಈ ಸನ್ಮಾನವು ಬಂದೊಗಿದ್ದು ನನ್ನನ್ನು ಮೂಕವಿಸ್ಮಿತನನ್ನಾಗಿಸಿದೆ. 'ಮಂಗಳೂರು ಸಾಹಿತ್ಯದ ಹಬ್ಬ'ವನ್ನು ಆಯೋಜಿಸಿದ ಭಾರತ ಫೌಂಡೇಶನ್, ಬೆಂಗಳೂರು ಸಂಸ್ಥೆಯ ಆಡಳಿತ ಮಂಡಳಿಯವರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಡಿಸೆಂಬರ್ 9, 2023 ಶನಿವಾರದಂದು ಉಡುಪಿಯಲ್ಲಿ ನೆರವೇರಿದ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಆಗಮಿಸಿದ ಉಡುಪಿ ಕ್ಷೇತ್ರದ ವಿಧಾನಸಭಾ ಸದಸ್ಯರಾದ, ನೆಚ್ಚಿನ ಜನಪ್ರತಿನಿಧಿ ಶ್ರೀ ಯಶಪಾಲ್ ಆನಂದ ಸುವರ್ಣ ಅವರನ್ನು, ಅಧ್ಯಕ್ಷತೆ ವಹಿಸಿ ಸಮಾರಂಭವನ್ನು ಸುಸೂತ್ರವಾಗಿ ನಡೆಸಿಕೊಟ್ಟ ಶ್ರೀ ಸತ್ಯೇಶ್ ಬೆಳ್ಳೂರ್ ಅವರನ್ನು, ಅಭ್ಯಾಗತರಾಗಿ ಆಗಮಿಸಿದ ಶ್ರೀ ಕಿರಣ್ ಕೆ. ಎಸ್. ಅವರನ್ನು ಮತ್ತು ಸಮಾರಂಭಕ್ಕೆ ಆಗಮಿಸಿದ ಎಲ್ಲಾ ಬಂಧುಮಿತ್ರರು, ಸ್ನೇಹಿತರು ಮತ್ತು

ಅತಿಥಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಶಿವಾಜಿ ಮಹಾರಾಜರ ಕುರಿತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಚಂದವಾಗಿ ನಡೆಸಿಕೊಟ್ಟ ಕಳಸದ ಪ್ರಬೋಧಿನಿ ವಿದ್ಯಾ ಕೇಂದ್ರದ ಪುಟಾಣಿಗಳು, ಹಿರಿಯ ವಿದ್ಯಾರ್ಥಿಗಳು ಮತ್ತು ಆಡಳಿತ ಮಂಡಳಿಯವರನ್ನು ಅಭಿನಂದಿಸುತ್ತೇನೆ.

ಉಡುಪಿಯ ಹಿರಿಯ ಚೇತನ, ಪ್ರಖ್ಯಾತ ಹಾಸ್ಯ ಲೇಖಕ, ಪುಸ್ತಕ ಸಂಸ್ಕೃತಿಯ ಪರಿವ್ರಾಜಕ ಕು.ಗೋ. ಸರ್ (ಶ್ರೀ ಹೆರ್ಗ ಗೋಪಾಲ ಭಟ್ಟರು) ಹತ್ತು ಪ್ರತಿಗಳು ಬೇಕೆಂದು ನನಗೆ ದೂರವಾಣಿ ಮೂಲಕ ತಿಳಿಸಿ, ಅದರ ಬೆಲೆಯನ್ನು ಬೇಡವೆಂದರೂ ಕೇಳದೆ ಕಿವಿಹಿಂಡಿ 'ಬೋಣಿ'ಯೆಂದು ಅಷ್ಟಿಷ್ಟು ನೋಟುಗಳನ್ನು ನನ್ನ ಜೇಬಿನಲ್ಲಿ ತುರುಕಿ, ಅವುಗಳನ್ನು ಸ್ವಂತ ಖರ್ಚಿನಲ್ಲಿ ಟಪ್ಪಾಲು ಮೂಲಕ ಸಾಹಿತ್ಯಾಸಕ್ತ ಮಿತ್ರರಿಗೆ ಹಂಚಿ, ನನ್ನನ್ನು ಹಾರೈಸಿದ ಮಹಾನುಭಾವರು. ನಾಡಿನುದ್ದಕ್ಕೂ ಅಮೋಘ ಪುಸ್ತಕ ಪ್ರೇಮವನ್ನು ಹರಡುತ್ತಿರುವ ಕು.ಗೋ. ಸರ್ ಅವರಿಗೂ, ಅವರ ಪುಸ್ತಕ ಸಂಸ್ಕೃತಿಗೂ ಮಂಗಳವಾಗಲೆಂದು ಶುಭಹಾರೈಸುತ್ತೇನೆ. ಅವರು ಪ್ರೀತಿಯಿಂದ ಕಳುಹಿಸಿದ ಒಂದೆರಡು ಡಜನ್ ಲೇಖಕರ ಪುಸ್ತಕಗಳನ್ನು ಓದಿ, ಅವರಿಗೆ ವಿಮರ್ಶೆಯನ್ನು ಒಪ್ಪಿಸುವ ಮನೆಗೆಲಸದ (ಹೋಂ ವರ್ಕ್) ಋಣ ಅನೇಕ ದಿನಗಳಿಂದ ನನ್ನಲ್ಲಿ ಬಾಕಿಯಿದೆ. ಓದಿದನಂತರ ಫೋನ್ ಮಾಡಿ, ಶಿವಾಜಿಯ ಕೆಲವು ವಿಚಾರಗಳನ್ನು ನೆನಪಿಗೆ ತಂದುಕೊಂಡು, ಅವರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಮಾವಿನ ಹಣ್ಣಿನ ರಸಾಯನವನ್ನು ಇನ್ನೊಮ್ಮೆ ಸವಿಯಲು ಜ್ಯೇಷ್ಠ–ಆಷಾಢ ಮಾಸದಲ್ಲಿ ಅವರ ಮನೆ 'ವಾಗ್ದೇವಿ'ಗೆ ಬರುವಂತೆ ಆಹ್ವಾನಿಸಿದ್ದರು. ಕು.ಗೋ.ಸರ್. ಅವರಂತಹ ಹಿರಿಯ ವಿದ್ವಾಂಸರ ಪ್ರೋತ್ಸಾಹ ಮತ್ತು ಆಶೀರ್ವಾದಗಳು ದೊರೆತಿರುವುದು ನನ್ನ ಭಾಗ್ಯ.

ನನ್ನ ಹಲವಾರು ಸ್ವಯಂಪ್ರೇರಿತ ಮಿತ್ರರು ಹತ್ತು, ಇಪ್ಪತ್ತೈದು, ಐವತ್ತು ಪ್ರತಿಗಳನ್ನು ಕೊಂಡುಕೊಂಡು, ಉಡುಪಿಯ ಮತ್ತು ಬೆಂಗಳೂರಿನ ಸುತ್ತುಮುತ್ತಲಿನ ಸರ್ಕಾರೀ ಕನ್ನಡ ಶಾಲೆಗಳ ಗ್ರಂಥಾಲಯಗಳಿಗೆ ವಿತರಿಸಿ, ಅದರಿಂದಾಗಿ ನೂರಾರು ಮಕ್ಕಳಿಗೆ ಶಿವಾಜಿ ಮಹಾರಾಜರ ವ್ಯಕ್ತಿತ್ವನ್ನು ಪರಿಚಯಿಸುವ ದೃಷ್ಟಿಯಿಂದ, ಬಹಳ ಮುತುವರ್ಜಿಯಿಂದ ಸಹಾಯ ಮಾಡಿರುವ ಸಂಗತಿಯನ್ನು ಇಲ್ಲಿ ಸ್ಮರಿಸಿಸುತ್ತೇನೆ. ಅವರ ಪ್ರೋತ್ಸಾಹ ಮತ್ತು ಸ್ನೇಹ ಎಂದಿಗೂ ಮರೆಯಲಾಗದು.

ದೂರದೂರುಗಳಿಂದ ಮತ್ತು ವಿದೇಶದಿಂದಲೂ ಮುಖಪರಿಚಯವಿರದ ಅನೇಕ ಓದುಗರು ಮಿಂಚಂಚೆಯಲ್ಲಿ (email) ಪತ್ರ ಬರೆದು ಮತ್ತು ಇನ್ನೂ ಕೆಲವರು ಅವರ ಶ್ಲಾಘನೆಯನ್ನು ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿರುವುದು, ಹಾಗೂ ದೂರವಾಣಿಯ ಮೂಲಕ ತಮ್ಮ ಮೆಚ್ಚುಗೆಯನ್ನು ಸೂಸಿ, ನನಗೆ ಅಚ್ಚರಿಯ ಜೊತೆಗೆ, ತುಂಬು ಸಂತಸದ ಹರ್ಷವನ್ನುಣಿಸಿದ್ದಾರೆ. ಧಾರವಾಡದ ಹಿರಿಯರೊಬ್ಬರು (ಹೆಸರು ನಮೂದಿಸುವುದು ಬೇಡವೆಂದಿದ್ದಾರೆ) ಊರುಗೋಲಿನ ಸಹಾಯದಿಂದ ವಿವಿಡ್ಲಿಪಿಯ ಕಾರ್ಯಾಲಯದವರೆಗೂ ನಡೆದು

ಬಂದು, ಕೃತಿಯನ್ನು ಖರೀದಿಸಿ, ಓದಿದ ಅನಂತರ ನುಡಿದ ಮೆಚ್ಚುಗೆಯ ಮಾತುಗಳು ಇನ್ನೂ ನನ್ನ ಸ್ಮೃತಿಪಟಲದಲ್ಲಿ ಮಾರ್ದನಿಸುತ್ತಿದೆ. ನನ್ನ ಕಣ್ಣಾಲಿಗಳನ್ನು ತೇವಗೊಳಿಸಿದ ಆ ಮಹನೀಯರಿಗೆ ನಮನಗಳು. ಇನ್ನೊಬ್ಬ ಹಿರಿಯರು ಈ ಗ್ರಂಥವನ್ನು ಓದಿದ ಅನಂತರ ಅವರಿಗೆ ಇನ್ನೂ ಬಾಳಬೇಕೆನ್ನುವ ಆಶಾಕಿರಣ ಚಿಗುರಿದೆಯೆಂದು, ಶಿವಾಜಿಯಂತೆ ನಾಡಿಗಾಗಿ, ಸಜನರಿಗಾಗಿ ನಿಸ್ಪೃಹತೆಯಿಂದ ಚೆನ್ನಾಗಿ ಬದುಕಬೇಕೆಂದು ಸ್ಫೂರ್ತಿ ನೀಡಿದೆಯೆಂದು ಒಂದು ವಿಡಿಯೋ ಕಳುಹಿಸಿದ್ದರು. ಒಬ್ಬ ಲೇಖಕನಿಗೆ ಇದಕ್ಕಿಂತಲೂ ಹೆಚ್ಚೇನು ಬೇಕು? ನನ್ನೆಲ್ಲ ಪ್ರಯತ್ನಗಳು ಸಾರ್ಥಕವೆನಿಸಿತು.

ಎರಡನೆಯ ಆವೃತ್ತಿಯಲ್ಲಿ ಓದುಗ ಮಿತ್ರರೊಬ್ಬರು ಸೂಚಿಸಿದ ಮೂರು ಸ್ವಾರಸ್ಯಕರ ಘಟನೆಗಳನ್ನು ಜೋಡಿಸಿದ್ದೇನೆ ಹಾಗೂ ಮೂರು ಕತೆಗಳನ್ನು ಪೂರಕವಾಗಿ ವಿಸ್ತರಿಸುವ ವಾಕ್ಯವೃಂದವನ್ನು ಸೇರಿಸಿದ್ದೇನೆ.

ಅನೇಕ ಮುದ್ರಣ ದೋಷಗಳನ್ನೆಲ್ಲ ತಿದ್ದಿ ಪರಿಷ್ಕರಿಸಿ, ಅಕ್ಷರ ಜೋಡಿಸಿ, ಪುಟಗಳನ್ನು ಮರುವಿನ್ಯಾಸಗೊಳಿಸಿ, ಎರಡನೆಯ ಮುದ್ರಣಕ್ಕೆ ತ್ವರಿತವಾಗಿ ಅಣಿ ಮಾಡಿದ ಉಡುಪಿಯ ಶ್ರೀಮತಿ ಸ್ವರ್ಣಲತಾ ಕೇಕುಣ್ಣಾಯ ಅವರ ಸಹಾಯಕ್ಕೆ ಚಿರಋಣಿ. ಏತನ್ಮಧ್ಯೆ, ಮೈಸೂರಿನ ಸಂಸ್ಕೃತ ವಿದ್ವಾಂಸರಾದ, ನಿವೃತ ಪ್ರಾಧ್ಯಾಪಕರಾದ ಶ್ರೀ ಕೊಕ್ಕಡ ವೆಂಕಟರಮಣ ಭಟ್ಟ ಗುರುಗಳು ಪ್ರೀತಿಯಿಂದ ಎರಡನೆಯ ಮುದ್ರಣದ ಕರಡುಪ್ರತಿಯನ್ನು ಪರಿಷ್ಕರಿಸಿ, ಸಂಸ್ಕರಿಸಿ ಮಾಡಿದ ಉಪಕಾರವನ್ನು ಇಲ್ಲಿ ನೆನೆಯುತ್ತೇನೆ.

ಈ ಕೃತಿಯ ಎರಡನೆಯ ಆವೃತ್ತಿಯನ್ನು ಚಂದವಾಗಿ ಮುದ್ರಿಸಿ, ಪ್ರಕಟಣೆಗೊಳಿಸುತ್ತಿರುವ 'ವಿವಿಡ್ಲಿಪಿ' ಪ್ರಕಾಶಕ ಸಂಸ್ಥೆಯವರಿಗೆ ಧನ್ಯವಾದಗಳು. ಈ ಗ್ರಂಥದ ಯಶಸ್ಸನ್ನು ನನಗಿಂತಲೂ ಹೆಚ್ಚು ಸಂಭ್ರಮಿಸಿದ 'ವಿವಿಡ್ಲಿಪಿ'ಯ ನಿರ್ದೇಶಕರಾದ ಶ್ರೀ ಸತ್ಯಪ್ರಮೋದ ಅವರ ಸ್ನೇಹ ಮತ್ತು ಪ್ರೋತ್ಸಾಹ ಅಮೂಲ್ಯ. ಎರಡನೆಯ ಆವೃತ್ತಿಗೂ ಮುಖಪುಟವನ್ನು ಚಂದವಾಗಿ ವಿನ್ಯಾಸಗೊಳಿಸಿದ ಶ್ರೀ ರವೀಂದ್ರ ಅ. ವಿಶ್ವಜ್ಞ, ಅರ್ಟಿಕ್ ಸಂಸ್ಥೆ, ಧಾರವಾಡ ಅವರಿಗೂ ಕೃತಜ್ಞತೆಗಳು.

ಛತ್ರಪತಿ ಶಿವಾಜಿ ಮಹಾರಾಜರ ಪಟ್ಟಾಭಿಷೇಕವಾಗಿ ಮುನ್ನೂರೈವತ್ತನೆಯ ವಾರ್ಷಿಕೋತ್ಸವದ ಸಂಭ್ರಮದ ವರ್ಷದಲ್ಲಿಯೇ ಈ ಕೃತಿಯು ಎರಡನೇ ಮುದ್ರಣಕ್ಕೇರಿರುವುದು ಅತ್ಯಂತ ಸಂತಸದ ಸಂಗತಿ.

ನನ್ನ ಈ ಕೃತಿಯನ್ನು ಕೊಂಡು ಓದಿದ ಮತ್ತು ಓದುವ ಎಲ್ಲಾ ವಾಚಕಪ್ರಭುಗಳಿಗೆ ನಮ್ಮ ತಂಡದವರ ಪರವಾಗಿ ಕೃತಜ್ಞತೆಗಳು. ಈ ಯಶಸ್ಸಿನಲ್ಲಿ ಭಾಗಿಯಾದ ಎಲ್ಲರನ್ನು ಸ್ಮರಿಸಿ, ಅವರೆಲ್ಲರ ಪ್ರೋತ್ಸಹಕ್ಕೆ ಇನ್ನೊಮ್ಮೆ ಶಿರಬಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಹರ ಹರ ಮಹಾದೇವ!

ಜೈ ಭವಾನಿ, ಜೈ ಶಿವಾಜಿ!!

ಜನವರಿ 17, 2024 **ಗುರುಪ್ರಸಾದಭಟ್**, ಉಡುಪಿ

ಪರಿವಿಡಿ

8. ಸರ್ವಸ್ವವನ್ನು ಶಿವಾಜಿಗಾಗಿ ಸಮರ್ಪಿಸಿದ ಕಾಹ್ನೋಜಿ ಜೇಧೆ
9. "ಹೋತ ಜೀವ ಮ್ಹಣುನ್ ವಾಚಲಾ ಶಿವ" (ಜೀವ ಮಹಾಳನಿಂದಾಗಿ ಉಳಿದ ಶಿವಾಜಿ)
10. ಭಾವೋದ್ವೇಗ ದುಡುಕು ಬುದ್ಧಿಯ ಪ್ರತಾಪರಾವ್ ಗುಜರ
11. ಶಿವಾಜಿಯ ಮಾರ್ಗದರ್ಶಕ, ಗುರು, ಅಭಿಮಾನಿ– ಸ್ವಾಮಿ ಶ್ರೀ ಸಮರ್ಥ ರಾಮದಾಸರು
12. ನಿಪುಣ ರಾಯಭಾರಿ ಗೋಪಿನಾಥ ಪಂತ ಬೋಕಿಲ್
13. ಶಿವಾಜಿಯ ಕಾನೂನನ್ನು ಶಿವಾಜಿಯೇ ಹೇಳಿದರೂ ಮುರಿಯಲೊಪ್ಪದ ದ್ವಾರಪಾಲಕ
14. ಹೋಳಿಕಾ ದಹನದಿಂದ ಉದ್ಭವಿಸಿದ ಯುದ್ಧ ನೀತಿ –ಸರ್ಜಿಕಲ್ ಸ್ಟ್ರೈಕ್
15. ಬಾಪೂಜಿ ಮುದ್ಗಲ್ ದೇಶಪಾಂಡೆ
16. ಅತ್ಯದ್ಭುತ ಪತ್ರಗಾರ, ಶಬ್ದ ಮಾಂತ್ರಿಕ, ನೀಲಾ ಪ್ರಭು
17. ಭಾರತದ ಮೊದಲ ನೌಕಾ ಸೇನಾನಿ– ಕಾಹ್ನೋಜಿ ಆಂಗ್ರೇ
18. ಹನುಮಂತೆ ಮತ್ತು ಭೋಸ್ಲೆ ಕುಟುಂಬದವರ ತಲೆಮಾರುಗಳ ಬಾಂದವ್ಯ
19. ಉಲ್ಲೋಲಕಲ್ಲೋಲಗೊಂಡ ಮರಾಠ ಸಾಮ್ರಾಜ್ಯವನ್ನು ಸಂತುಳಿಸಿದ ಪ್ರಹ್ಲಾದ ನಿರಾಜಿ
20. ಹೀರಕನಿ ಬುರುಜ್
21. ಮಿರ್ಜಾ ರಾಜೇ ಜಯಸಿಂಹನಿಗೇ ಸಡ್ಡು ಹೊಡೆದ ಮುರಾರ್ ಬಾಜೀ ದೇಶಪಾಂಡೆ
22. "ಶತ್ರುವಿನ ಶತ್ರು ಮಿತ್ರ" ಕೌಟಿಲ್ಯ ನೀತಿಯನ್ನನುಸರಿಸಿ ಗೆದ್ದ ತಾನಾ ಶಹಾ ಮತ್ತು ಶಿವಾಜಿ
23. ತಂದೆಯನ್ನೇ ಕೊಂದ ಸಂಭಾಜಿ ರಾಜನನ್ನು ರಕ್ಷಿಸಿದ ಖಾಂಡೋ ಬಲ್ಲಾಳ
24. ವಿಶಾಲಗಢ ಮತ್ತು ಶಿವಾಜಿಯನ್ನು ರಕ್ಷಿಸಿದ ರಂಗೋ ನಾರಾಯಣ
25. ವಾಣಿ–ದಿಂಡೋರಿ– ಶಿವಾಜಿಯ ಮೊತ್ತಮೊದಲ ತೆರೆದ ಮೈದಾನ ಯುದ್ಧದಲ್ಲಿ ಜಯ
26. ಬಾಜೀ ಪ್ರಭು ದೇಶಪಾಂಡೆ ಮತ್ತು ಫುಲ್ಲಾಜಿ ಪ್ರಭು ದೇಶಪಾಂಡೆ– ಪಾವನಕಿಂಡದ ಬಲಿದಾನಿ ಸಹೋದರರು
27. ಸಂಭಾಜಿ ಕಾವಜಿ ಕೊಂಢಾಳಕರ್– ಅಫ್ಜ಼ಲನ ಶಿರಚ್ಛೇದಿಸಿದ ವೀರ